ಆದಿಲಶಾಹಿ ಸಾಹಿತ್ಯ ಸಂಪುಟ : ೧೩

ಕರ್ನಾಟಕದಲ್ಲಿಯ

ಅರೇಬಿಕ್, ಪರ್ಶಿಯನ್, ಉರ್ದು ಶಾಸನ ಸೂಚಿ

ವಚನಪಿತಾಮಹ ಡಾ|| ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

[illegible]

ಕರ್ನಾಟಕದಲ್ಲಿನ
ಅರೇಬಿಕ್, ಪರ್ಷಿಯನ್, ಉರ್ದು
ಶಾಸನ ಸೂಚಿ

ಆದಿಲಶಾಹಿ ಸಾಹಿತ್ಯ ಸಂಪುಟ : ೧೩

ಕರ್ನಾಟಕದಲ್ಲಿಯ

ಅರೇಬಿಕ್, ಪರ್ಶಿಯನ್, ಉರ್ದು ಶಾಸನ ಸೂಚಿ

ಆದಿಲಶಾಹಿ ಸಾಹಿತ್ಯ ಸಂಪುಟ : ೧೩

ಕರ್ನಾಟಕದಲ್ಲಿಯ

ಅರೇಬಿಕ್, ಪರ್ಶಿಯನ್, ಉರ್ದು ಶಾಸನ ಸೂಚಿ

ಅನುವಾದಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

Catalogue of Arebik, Persian, Urdu Inscriptions in Karnataka – compiled by **Dr M. Yaseen Quddusi,** Nagpur (MH) in English
Kannada Translation by – **Dr. Krishna Kolharkulkarni**

Published by : **Dr. P.G.Halakatti Research Centre,**
B.L.D.E. Association, Vijayapur, Karnataka

Edition : **2016**

Pages : **xxxii + 460 = 492**

Copies : **1000**

Price : **Rs. 300.00**

Typeset : **Dr. P. G. Halakatti Research Centre,** Vijayapur

Printed : **Print Point,** Bengaluru. Mob : 9739067359

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಪುಸ್ತಕ ಪ್ರಕಟವಾಗಿದೆ.

ಕರ್ನಾಟಕದಲ್ಲಿಯ ಅರೇಬಿಕ್, ಪರ್ಶಿಯನ್, ಉರ್ದು ಶಾಸನಗಳ ಸೂಚಿ –
ಮೂಲ ಡಾ. ಎಮ್. ಯಾಸೀನ ಕುದ್ದುಸಿ, ನಾಗಪುರ (ಮಹಾರಾಷ್ಟ್ರ) ಅವರ ಇಂಗ್ಲೀಷ್ ಕೃತಿ
ಅನುವಾದಕರು : **ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**

ಪ್ರಕಾಶಕರು : **ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ,**
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

ಹಕ್ಕುಗಳು : **ಪ್ರಕಾಶಕರು**

ಆವೃತ್ತಿ : **ಪ್ರಥಮ ೨೦೧೬**

ಪುಟಗಳು : **xxxii + ೪೬೦ = ೪೯೨**

ಪ್ರತಿಗಳು : ೧೦೦೦

ಬೆಲೆ : **ರೂ. ೩೦೦.೦೦**

ಡಿ.ಟಿ.ಪಿ. : **ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ,** ವಿಜಯಪುರ

ಮುದ್ರಣ : **ಪ್ರಿಂಟ್ ಪಾಯಿಂಟ್,** ಬೆಂಗಳೂರು
ಮೊ. ೯೭೩೯೦೬೭೩೫೯

*

ಆದಿಲ್‌ಶಾಹಿ ಸಾಹಿತ್ಯ ಅನುವಾದ ಸಮಿತಿ

ಅಧ್ಯಕ್ಷರು

ಡಾ. ಎಂ.ಎಂ. ಕಲಬುರ್ಗಿ

(೩೦-೦೮-೨೦೧೫ರ ವರೆಗೆ)

ನಿರ್ದೇಶಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಸದಸ್ಯರು

ಡಾ. ಬಿ.ಜಿ. ಮೂಲಿಮನಿ

ಡಾ. ರಹಮತ್ ತರೀಕೆರೆ

ಶ್ರೀ ರಂಜಾನ್ ದರ್ಗಾ

ಡಾ. ಎಚ್. ಜಿ. ದಡ್ಡಿ

ವಿಶೇಷ ಆಮಂತ್ರಿತ ಸದಸ್ಯರು

ಶ್ರೀ ಶಿವಯೋಗಿ ಎಸ್. ತಂಬಾಕೆ

ಡಾ. ಎಂ. ಎಸ್. ಮದಭಾವಿ

ಮೌಲಾನಾ ಮಹಬೂಬುರ್ ರಹಮಾನ ಮದನಿ

ಪದನಿಮಿತ್ತ ಸದಸ್ಯರು

ಜಿಲ್ಲಾಧಿಕಾರಿಗಳು, ವಿಜಯಪುರ

ಸಹಾಯಕ ನಿರ್ದೇಶಕರು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಜಯಪುರ

*

ಅಧ್ಯಕ್ಷರ ಮಾತು

ಎಂ. ಎಂ. ಕಲಬುರ್ಗಿ

ವಿಜಯಪುರದ ಬಿ.ಎಲ್.ಡಿ. ಶಿಕ್ಷಣ ಸಂಸ್ಥೆ ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಸಂಸ್ಥೆಯಾಗಿಯೂ ಬೆಳೆಯುತ್ತಲಿದೆ. ಈ ಸಂಸ್ಥೆಯ ಭಾಗವಾಗಿರುವ 'ವಚನಪಿತಾಮಹ ಡಾ|| ಫ.ಗು.ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಇಂದಿನ ಕಾರ್ಯ ಮತ್ತು ಕಾರ್ಯಕ್ರಮಗಳು ಇದಕ್ಕೆ ಉದಾಹರಣೆಯೆನಿಸಿವೆ.

ಡಾ|| ಫ.ಗು. ಹಳಕಟ್ಟಿಯವರದು ಕೇವಲ ವ್ಯಕ್ತಿಕಲ್ಯಾಣಕೇಂದ್ರಿತ ವ್ಯಕ್ತಿತ್ವವಲ್ಲ, ಸಮಾಜಕಲ್ಯಾಣಕೇಂದ್ರಿತ ವ್ಯಕ್ತಿತ್ವ. ಇದಕ್ಕೆ ತಕ್ಕಂತೆ ಅವರ ಹೆಸರಿನ ಈ ಸಂಸ್ಥೆ ಎಲ್ಲ ಸಮಾಜಗಳನ್ನು–ಸಾಮಾಜಿಕರನ್ನು 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂಬ ಆದರ್ಶದಲ್ಲಿ ಬೆಳೆಯುತ್ತಲಿದೆ. ಇದಕ್ಕೆ ಸಾಕ್ಷಿಯಾಗಿದೆ, ಈ ಸಂಸ್ಥೆ ಕೈಗೆತ್ತಿಕೊಂಡಿರುವ 'ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆ'.

ಮಧ್ಯಕಾಲೀನ ಭಾರತೀಯ ಇತಿಹಾಸದಲ್ಲಿ ವಿಜಯಪುರದ ಆದಿಲ್‌ಶಾಹಿಗಳ ಹೆಸರು ಪ್ರಸಿದ್ಧವಾದುದು, ಸುಪ್ರಸಿದ್ಧವಾದುದು. ಏಕಕಾಲಕ್ಕೆ ಉತ್ತರದ ಮೊಗಲರೊಂದಿಗೆ, ದಕ್ಷಿಣದ ವಿಜಯನಗರದವರೊಂದಿಗೆ ಸಂಘರ್ಷ–ಸಮನ್ವಯದಿಂದ ೧೪೮೯–೧೬೮೬ರವರೆಗೆ ರಾಜ್ಯಭಾರ ಮಾಡಿದ ರಾಜಮನೆತನವಿದು. 'ದೀನೇ ಇಲಾಹಿ' ಖ್ಯಾತಿಯ ಮೊಗಲ್ ಮನೆತನದ ಅಕ್ಬರ್‌ನಂತೆ 'ದಾದ ಇಲಾಹಿ' ಖ್ಯಾತಿಯ ಆದಿಲ್‌ಶಾಹಿ ಮನೆತನದ ಜಗದ್ಗುರು ೨ನೆಯ ಇಬ್ರಾಹಿಮ್ ಬಾದಷಹನು ಸಮನ್ವಯ ಸಮಾಜಸ್ಥಾಪಿಸಲು ನಿರತನಾದುದು ಗಮನಾರ್ಹವೆನಿಸಿದೆ.

ಈ ಮನೆತನದ ಎಂಟು ಜನ ಅರಸರು ಸಾಹಿತಿಗಳು–ಸಾಹಿತ್ಯಪ್ರೇಮಿಗಳು. ಈ ಸಾಹಿತ್ಯ ಲೌಕಿಕ–ಧಾರ್ಮಿಕ ಎರಡೂ ಆಯಾಮಗಳಲ್ಲಿ ಬಿಚ್ಚಿ ಬೆಳೆದಿದೆ. ಹಿಂದೂಗಳದು

ಪುರಾಣಪ್ರಜ್ಞೆಯಾದರೆ, ಮುಸಲ್ಮಾನರದು ಇತಿಹಾಸಪ್ರಜ್ಞೆ. ಈ ಪ್ರಜ್ಞೆಗೆ ಅನುಗುಣವಾಗಿ ಇವರ ಆಸ್ಥಾನದಲ್ಲಿ–ಇವರ ರಾಜ್ಯದಲ್ಲಿ ಸುಮಾರು ೨೦ ಕೃತಿಗಳು ಹುಟ್ಟಿಕೊಂಡಿವೆ. ಸಮಕಾಲೀನ ರಾಜಕೀಯದೊಂದಿಗೆ ಜೀವನದ ಇತರ ಕ್ಷೇತ್ರಗಳನ್ನೂ ಚಿತ್ರಿಸಿದ ಈ ಸಾಹಿತ್ಯದ ಬಹುಭಾಗ ಪ್ರಕಟವಾಗದೆ, ಕನ್ನಡಕ್ಕೆ ಅನುವಾದವಾಗದೆ ಉಳಿದಿದ್ದಿತು. ಈ ದೊಡ್ಡ ಆಕರವನ್ನು ಕೈಬಿಟ್ಟು ಈವರೆಗೆ ಇತಿಹಾಸ ಬರೆದುದು ವಿಷಾದದ ಸಂಗತಿಯಾಗಿದೆ. ಇದಕ್ಕೆ ಕಾರಣ, ಈ ಸಾಹಿತ್ಯದ ಖಣಿ, ಉರ್ದು–ಪರ್ಶಿಯನ್ ಭಾಷೆಯಲ್ಲಿರುವುದು ಮತ್ತು ಈ ಅರಸರು ಅನ್ಯರೆಂದು ಭಾವಿಸಿರುವುದು. 'ವಚನಪಿತಾಮಹ ಡಾ॥ ಫ.ಗು.ಹಳಕಟ್ಟಿ ಸಂಶೋಧನ ಸಂಸ್ಥೆ' ಈ ಯಾವುದೇ ಸೂತಕಗಳನ್ನು ಪರಿಗಣಿಸದೆ ಪ್ರಸ್ತುತ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಯೋಜನೆ ಅಸ್ತಿತ್ವಕ್ಕೆ ಬಂದಿದೆ. ಇದನ್ನು ಒದಗಿಸುವಲ್ಲಿ ತೀವ್ರಆಸಕ್ತಿ ವಹಿಸಿದವರು ಈ ಹಿಂದೆ ಕನ್ನಡ–ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದ ಶ್ರೀ ಗೋವಿಂದ ಕಾರಜೋಳ ಅವರು. ಈ ಆಸಕ್ತಿಯನ್ನು ಮುಂದುವರಿಸುತ್ತಲಿರುವವರು ಇಂದು ಸಚಿವರಾಗಿರುವ ಶ್ರೀಮತಿ ಉಮಾಶ್ರೀ ಅವರು. ಸಹಕರಿಸಿದವರು ಈ ಇಲಾಖೆಯ ಅಧಿಕಾರಿಗಳು. ಇವರಿಗೆ ನಾವು ಕೃತಜ್ಞರಾಗಿದ್ದೇವೆ.

ಬಿ.ಎಲ್.ಡಿ. ಶಿಕ್ಷಣ ಸಂಸ್ಥೆ ನಮಗೆಲ್ಲ ಹೆಮ್ಮೆಯ ಮಾದರಿ. ಈ ರೀತಿಯಲ್ಲಿ ಇದನ್ನು ಬೆಳೆಸುತ್ತಲಿರುವವರು ಅಧ್ಯಕ್ಷರಾದ ಶ್ರೀ ಎಂ.ಬಿ. ಪಾಟೀಲರು. ಈ ಸಂಸ್ಥೆಯ ಅಂಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಗಾಗಿ ತ್ರಿಕರಣಪೂರ್ವಕ ದುಡಿಯುತ್ತಲಿರುವವರು ಇದರ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆಯವರು. ಇವರಿಬ್ಬರ ಪ್ರೋತ್ಸಾಹ–ನೆರವುಗಳಿಗೆ, ಈ ಯೋಜನೆಯ ಸಲಹಾ ಮಂಡಳಿಯ ಸದಸ್ಯರ ಮಾರ್ಗದರ್ಶನಕ್ಕೆ, ಅನುವಾದ ಕಾರ್ಯದಲ್ಲಿ ವಿದ್ವಾಂಸರು ನೀಡಿದ ಸಹಕಾರಕ್ಕೆ ಅಭಿನಂದನೆಗಳು.

ಸರಕಾರ ರೂಪಿಸಿದ ಸಲಹಾಮಂಡಳಿಯ ನಿರ್ದೇಶನದಂತೆ ಈ ಯೋಜನೆಗಾಗಿ ಡಾ॥ ಫ.ಗು.ಹಳಕಟ್ಟಿ ಭವನದಲ್ಲಿ ಒಂದು ಸ್ವತಂತ್ರ ಕಾರ್ಯಾಲಯವನ್ನು, ಅಗತ್ಯ ಸಿಬ್ಬಂದಿ ವರ್ಗವನ್ನು ಅಸ್ತಿತ್ವಕ್ಕೆ ತರಲಾಯಿತು. ಈ ಮಣಿಹಕ್ಕೆ ಡಾ॥ ಕೃಷ್ಣ ಕೋಲ್ಹಾರಕುಲಕರ್ಣಿ ಅವರು ನಿರ್ದೇಶಕರಾಗಿ ಲಭಿಸಿರುವುದು ಒಂದು ಸುಯೋಗವೆಂದೇ ಭಾವಿಸುತ್ತೇವೆ. ಮೊದಲಿನಿಂದಲೂ ಆದಿಲ್‌ಶಾಹಿ ಸಾಹಿತ್ಯ–ಸಂಸ್ಕೃತಿಗಳ ಅಧ್ಯಯನದಲ್ಲಿ ನಿಮಗ್ನರಾದ ಇವರು ಈ ಯೋಜನೆಗಾಗಿ ದುಡಿದ ರೀತಿ ಅನನ್ಯವಾದುದು. ಹಸ್ತಪ್ರತಿ–ಮುದ್ರಿತಪ್ರತಿಗಳ ಸಂಗ್ರಹ, ಸೂಕ್ತ ಅನುವಾದಕರ ಆಯ್ಕೆ, ಅವರಿಂದ ಕೆಲಸಮಾಡಿಸಿಕೊಳ್ಳುವ ರೀತಿ,

ಅನುವಾದಗಳ ಪರಿಷ್ಕರಣ–ಪ್ರಕಟಣೆ ಇತ್ಯಾದಿಗಳಿಗಾಗಿ ಇವರು ತ್ರಿವಿಕ್ರಮ ಪ್ರಜ್ಞೆಯಿಂದ ಶ್ರಮಿಸಿದ್ದಾರೆ. ಇವರೊಂದಿಗೆ ಫ.ಗು.ಹಳಕಟ್ಟಿ ಸಂಶೋಧನ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ.ಎಂ.ಎಸ್.ಮದಭಾವಿ ಅವರು ನಿರಪೇಕ್ಷ ಭಾವದಿಂದ ಹಗಲಿರುಳು ದುಡಿದಿದ್ದಾರೆ. ಇವರೊಂದಿಗೆ ಮಿಕ್ಕ ಸಿಬ್ಬಂದಿ ವರ್ಗದವರು ಸಹಕರಿಸಿದ ರೀತಿಯೂ ಸ್ಮರಣೀಯವಾಗಿದೆ. ಇವರೆಲ್ಲರಿಗೂ ಕೃತಜ್ಞತೆಗಳು.

■

*

ಪ್ರಸ್ತಾವನೆ

ಸಮಿತಿ ಸದಸ್ಯರು

ಮಧ್ಯಯುಗೀನ ಭಾರತದ ಚರಿತ್ರೆಯಲ್ಲಿ ವಿಜಾಪುರದ ಆದಿಲಶಾಹಿಗಳ ಪಾತ್ರ ಬಹು ಮುಖ್ಯವಾಗಿದೆ. ದಕ್ಷಿಣ ಭಾರತದ ಬಹುಪಾಲು ಪ್ರದೇಶವನ್ನು ಅವರು ವಿಜಾಪುರ ಕೇಂದ್ರದಿಂದ ಆಳಿದರು. ಇಂದಿನ ಅಖಂಡ ಕರ್ನಾಟಕವನ್ನು ಅವರು ಸುಮಾರು ಒಂದು ಶತಮಾನದಷ್ಟು ಕಾಲ ತಮ್ಮ ಅಂಕಿತದಲ್ಲಿ ಇಟ್ಟುಕೊಂಡಿದ್ದರು. ಹೀಗಾಗಿ ಆದಿಲಶಾಹಿಗಳ ಚರಿತ್ರೆಯನ್ನು ಅಭ್ಯಸಿಸದೆ ಕರ್ನಾಟಕದ ಚರಿತ್ರೆ ಪೂರ್ಣಗೊಳ್ಳುವುದಿಲ್ಲ.

ಈ ಆದಿಲಶಾಹಿಗಳ ರಾಜ್ಯವು ಕ್ರಿ.ಶ.೧೪೮೯ರಿಂದ ೧೬೮೬ರ ವರೆಗೆ ಅಸ್ತಿತ್ವದಲ್ಲಿದ್ದಿತು. ಇಲ್ಲಿ ಆಳಿದ ೮ ಜನ ಬಾದಶಹರುಗಳ ವ್ಯಕ್ತಿತ್ವ ವರ್ಣಮಯವಾಗಿದ್ದಿತು. ಸಾಹಿತ್ಯ, ಸಂಗೀತ, ಕಲೆ, ವಾಸ್ತುಶಿಲ್ಪ, ಧರ್ಮ ಜೊತೆಗೆ ರಾಜಕಾರಣ ಇವುಗಳಲ್ಲೆಲ್ಲ ಇವರು ತಮ್ಮದೇ ಆದ ಮುದ್ರೆಯನ್ನು ಒತ್ತಿ ಹೋಗಿದ್ದಾರೆ.

ಇಂದು ಜಗತ್ತಿನಲ್ಲೆಲ್ಲ ಓದುತ್ತಿರುವ ಗುಲ್ಶನೆ-ಇಬ್ರಾಹಿಮಿ ಇತಿಹಾಸದ ಕರ್ತೃ ಮಹಮ್ಮದ ಕಾಸಿಮ ಫರಿಸ್ತಾ, ಎರಡನೆಯ ಇಬ್ರಾಹಿಮ ಆದಿಲಶಹ(ಕ್ರಿ.ಶ. ೧೫೮೦-೧೬೨೬)ನ ಆಸ್ಥಾನದಲ್ಲಿದ್ದುಕೊಂಡು ಆ ಗ್ರಂಥವನ್ನು ಬರೆದನು. ಅದರಂತೆ ಇನ್ನೂ ಹಲವಾರು ಜನ ಇತಿಹಾಸಕಾರರು, ಕವಿಗಳು ಆದಿಲಶಾಹಿ ಆಸ್ಥಾನದಲ್ಲಿ ಇದ್ದುಕೊಂಡು ಕೃತಿಗಳನ್ನು ರಚಿಸಿದ್ದಾರೆ. ಅವುಗಳೆಲ್ಲ ಅಂದು ಪ್ರಚಲಿತದಲ್ಲಿದ್ದ ಪರ್ಶಿಯನ್ ಇಲ್ಲವೆ ದಖಣಿ ಹಿಂದಿ ಭಾಷೆಗಳಲ್ಲಿ ರಚಿತವಾಗಿವೆ.

ನಾಡಿನ ವಿಶ್ವವಿದ್ಯಾಲಯಗಳು, ಭಾರತೀಯ ಇತಿಹಾಸ ಅನುಸಂಧಾನ ಇತ್ಯಾದಿ ಸಂಸ್ಥೆಗಳು ಇತಿಹಾಸದ ಕೆಲಸ ಮಾಡುತ್ತಿದ್ದರೂ ಬಿಜಾಪುರ ಇತಿಹಾಸದ ವಿಷಯದಲ್ಲಿ

ಆಗಬೇಕಾದಷ್ಟು ಆಗಲಿಲ್ಲ. ಅದಕ್ಕೆ ಮೂಲ ಕಾರಣ, ಬಹುಶಃ ಅಧ್ಯಯನಕ್ಕೆ ಬೇಕಾಗುವ ಮೂಲ ಆಕರಗಳು ವಿಶ್ವದಾದ್ಯಂತ ಚದುರಿ ಹೋಗಿರುವುದು ಮತ್ತು ಅವು ಪರ್ಶಿಯನ್, ದಖಣಿ ಭಾಷೆಗಳಲ್ಲಿರುವುದು. ಈ ಕೊರತೆಯನ್ನು ಗಮನಿಸಿ ಬಿಜಾಪುರ ಆದಿಲಶಾಹಿ ಕಾಲದ ಸಾಹಿತ್ಯವನ್ನು ಕನ್ನಡದ ಮೂಲಕ ಪ್ರಕಟಿಸುವ ಪ್ರಯತ್ನವಾಗಿದೆ. 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'.

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಲಗ್ನವಾಗಿರುವ ಬಿಜಾಪುರ ಬಿ.ಎಲ್.ಡಿ.ಇ. ಸಂಸ್ಥೆಯ ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ದಶಕದಿಂದ ಸಂಶೋಧನಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ ಗು ಹಳಕಟ್ಟಿ ಅವರ ಸಮಗ್ರಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸಿದೆ. ೮ ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಪಿಹೆಚ್.ಡಿ. ಪದವಿಗಳನ್ನು ಪಡೆದಿದ್ದಾರೆ. ಇನ್ನು ಹಲವರು ಪದವಿ ಪಡೆಯುವ ದಾರಿಯಲ್ಲಿದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಅವರ ಆಸಕ್ತಿಯಂತೆ ಸಂಶೋಧನ ಕೇಂದ್ರವು 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಯ ಕರಡು ಪ್ರತಿಯನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳಿಸಿತು. ಯೋಜನೆಯ ಮಹತ್ವವನ್ನು ಗುರುತಿಸಿ ಕರ್ನಾಟಕ ಸರಕಾರವು, ಡಾ. ಎಂ.ಎಂ. ಕಲಬುರ್ಗಿ ಅವರ ಅಧ್ಯಕ್ಷತೆಯಲ್ಲಿ ಡಾ. ಬಿ.ಜಿ.ಮೂಲಿಮನಿ, ಡಾ. ರಹಮತ ತರೀಕೆರೆ. ಶ್ರೀ ರಂಜಾನ್ ದರ್ಗಾ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಡಾ. ಎಚ್.ಜಿ.ದಡ್ಡಿ, ಈ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಯೋಜನೆಗೆ ಅನುಮತಿ ನೀಡಿತು.

ಇದು ಭಾರತದಲ್ಲಿಯೇ ಒಂದು ಅಪರೂಪದ ಯೋಜನೆ. ಮಧ್ಯಯುಗೀನ ಕಾಲದ ಬಿಜಾಪುರ ಆದಿಲಶಾಹಿಗಳ ಕಾಲದಲ್ಲಿ ರಚಿತಗೊಂಡ ಎಲ್ಲ ಸಾಹಿತ್ಯವನ್ನು ಕನ್ನಡಕ್ಕೆ ತರುವುದು ಯೋಜನೆಯ ಮುಖ್ಯ ಉದ್ದೇಶ.

ಪ್ರಾರಂಭದಲ್ಲಿ ಆದಿಲಶಾಹಿ ಚರಿತ್ರೆಗೆ ಸಂಭಂಧಪಟ್ಟ ಈ ಕೆಳಗಿನ ಸಮಕಾಲೀನ ಕೆಲವು ಚರಿತ್ರ ಗ್ರಂಥಗಳ ಪಟ್ಟಿಯನ್ನು ಮಾಡಲಾಯಿತು. ಅವು ದೊರೆಯುವ ಸಂಭಾವ್ಯ ಸ್ಥಳಗಳನ್ನೂ ಗುರುತಿಸಲಾಯಿತು.

೧. **ಮುಹಮ್ಮದ ಕಾಸೀಮ ಫೆರಿಸ್ತಾ : ತಾರೀಖ-ಇ-ಫೆರಿಸ್ತಾ [ಪರ್ಶಿಯನ್]**
ಇಂಗ್ಲೀಷಿಗೆ ಅನುವಾದಿಸಿದ್ದಾರೆ ಕ್ಯಾಪ್ಟನ್ ಬ್ರಿಗ್ಸ [ಕ್ರಿ.ಶ.೧೮೯೯] ಮೂಲ ಪರ್ಶಿಯುನ್ ಹಸ್ತಪ್ರತಿ ಮುಂಬಯಿ ಅರ್ಕೀವ್ಸ, ಸಾಲಾರ ಜಂಗ ವಸ್ತುಸಂಗ್ರಹಾಲಯ ಹೈದರಾಬಾದ ಇತ್ಯಾದಿಗಳಲ್ಲಿ ಲಭ್ಯ.

೨. **ಅಬ್ದುಲ್ಲಾ ದೆಹಲವಿ : ಇಬ್ರಾಹಿಮನಾಮಾ [ದಖಣಿ]**
ಪ್ರಕಟವಾಗಿದೆ. ಮೂಲ ಹಸ್ತಪ್ರತಿ ಮುಂಬಯಿ ಅರ್ಕೀವ್ಸ ಮತ್ತು ಔಂಧ ಅರ್ಕೀವ್ಸ ಸಾತಾರಾದಲ್ಲಿವೆ.

೩. **ಅಸದಬೇಗ : ವಾಕಾಯತೆ ಅಸದಬೇಗ [ಪರ್ಶಿಯನ್]**

ಚಾಪ್‌ಮನ್‌ನಿಂದ ಇಂಗ್ಲಿಷ್‌ಗೆ ಅನುವಾದವಾಗಿದೆ [೧೮ನೆ ಶತ]. ನಂತರ ಪಿ.ಎಂ.ಜೋಶಿ ಅವರಿಂದಲೂ. ಜೊತೆಗೆ ಇಲಿಯಟ್ ಮತ್ತು ಡೌಸನ್ ಸಂಪುಟ ೬ರಲ್ಲಿ ಭಾಗಶಃ ಅನುವಾದವಾಗಿದೆ. ಇದರ ಹಸ್ತಪ್ರತಿಯು ಆಂಧ್ರಪ್ರದೇಶ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ ಹೈದರಾಬಾದಿನಲ್ಲಿ ಲಭ್ಯ.

೪. **ಕಾಜಿ ನೂರುಲ್ಲಾ : ತಾರೀಖೆ ಅಲಿ ಆದಿಲಶಹ [ದಖಣಿ]**
ಮೂಲ ಹಸ್ತಪ್ರತಿಗಳು ಮುಂಬಯಿ ಅರ್ಕೀವ್ಸ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್ ಮತ್ತು ಬ್ರಿಟಿಶ್ ಮ್ಯುಜಿಯಮ್ ಲಾಯಬ್ರರಿ ಲಂಡನ್, ಸಾಲಾರಜಂಗ ವಸ್ತುಸಂಗ್ರಹಾಲಯ ಹೈದ್ರಾಬಾದಗಳಲ್ಲಿ ಲಭ್ಯ.

೫. **ಜುಹೂರ್ ಬಿನ್ ಜುಹೂರಿ : ಮಹಮ್ಮದನಾಮಾ [ಪರ್ಶಿಯನ್]**
ಹಸ್ತಪ್ರತಿಯು ಪ್ರಾಚ್ಯ ವಸ್ತುಸಂಗ್ರಹಾಲಯ ಬಿಜಾಪುರದಲ್ಲಿ ಲಭ್ಯ.ಭಾಗಶಃ ಬಿ.ಡಿ.ವರ್ಮಾರಿಂದ ಇಂಗ್ಲಿಷಿನಲ್ಲಿ ಅನುವಾದ.

೬. **ನುಸ್ರತಿ : ಅಲಿನಾಮಾ [ದಖಣಿ]**
ಪ್ರಕಟವಾಗಿದೆ. ಪ್ರತಿ ದುರ್ಮಿಳ.

೭. **ಬಶೀರುದ್ದೀನ ಅಹ್ಮದ : ವಾಕಾತೆ ಮಾಮಲಕತ್ ಬಿಜಾಪುರ [ಉರ್ದು]**
ಕರ್ನಾಟಕ ಉರ್ದು ಅಕಡೆಮಿಯಿಂದ ಪ್ರಕಟ. ಮೂಲಪ್ರತಿ ಸಾಲಾರಜಂಗ ಮ್ಯುಜಿಯಮ್ ಹೈದರಾಬಾದದಲ್ಲಿ ಲಭ್ಯ.

೮. **ಮುಹಮ್ಮದ ಹಾಶೀಮ ಘುಜೂನಿ : ಫುತುಹತೆ ಆದಿಲಶಾಹಿ [ಪರ್ಶಿಯನ್]**
ಮುಂಬಯಿ ಅರ್ಕೀವ್ಸ, ಬ್ರಿಟಿಶ್ ಇಂಡಿಯಾ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿಗಳಿವೆ.

೯. **ಮೀರ್ ರಫೀಯುದ್ದೀನ ಶಿರಾಜಿ : ತಧ್ಕಿರಾತ–ಅಲ್–ಮುಲ್ಕ [ಪರ್ಶಿಯನ್]**
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೦. **ಶೇಖ್‌ಜೈನುದ್ದೀನ ಅಲ್ ಮಾಬಾರಿ: ತುಹಫತುಲ್ ಮುಜಾಹಿದೀನ [ಪರ್ಶಿಯನ್]**

೧೧. **ಸೈಯದ ಅಲಿ ಬಿಲಗ್ರಾಮಿ : ತಾರೀಖೆ ದಖನ್ ೪ ಸಂಪುಟಗಳು [ಉರ್ದು]**

೧೨. **ಸಯ್ಯದ ಮೊಹಿಯುದ್ದೀನ ಪೀರಜಾದಾ : ಅಹವಾಲೆ ಸಲಾತೀನ ಬಿಜಾಪುರ** [ಪರ್ಶಿಯನ್]
ಬ್ರಿಟಿಶ್ ವಸ್ತುಸಂಗ್ರಹಾಲಯ ಲಂಡನ್, ಹಸ್ತಪ್ರತಿ ಸಂಖ್ಯೆ ೨೬೨೭೦.

೧೩. **ಫಿತೂರಖಾನ ವಲ್ಲದ ಅಸದಖಾನ ಲ್ಯಾರಿಯ : ಹಪ್ತ ಕುರ್ಸೀ** [ಪರ್ಶಿಯನ್]
ಸಾಲಾರಜಂಗ ವಸ್ತು ಸಂಗ್ರಹಾಲಯ ಹೈದ್ರಾಬಾದ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿ ಲಭ್ಯ.

೧೪. **೨ನೆಯ ಇಬ್ರಾಹಿಮ ಆದಿಲಶಹ : ಕಿತಾಬೆ ನವರಸ** [ದಖಣಿ ಹಿಂದಿ]
ಕರ್ನಾಟಕ ವಿ.ವಿ.ಯಿಂದ ಪುಸ್ತಕ ಪ್ರಕಟವಾಗಿದೆ.

೧೫. **ಜುಬೇರಿ : ರೌಜತ್ ಅಲ್ ಔಲಿಯಾ ಎ ಬಿಜಾಪುರ** [ಪರ್ಶಿಯನ್]
ಆಂಧ್ರಪ್ರದೇಶ ಪ್ರಾಚ್ಯ ಹಸ್ತಪ್ರತಿ ಸಂಗ್ರಹ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ. ಹಸ್ತಪ್ರತಿ ಸಂಖ್ಯೆ ೧೪೮೧೩

೧೬. **ಜುಬೇರಿ : ಬುಸಾತಿನೆ ಸಲಾತೀನ** [ಪರ್ಶಿಯನ್]
ಮರಾಠೀ ಅನುವಾದದಿಂದ ಕನ್ನಡಕ್ಕೆ ಅನುವಾದ ಆಗಿದೆ. ಪರ್ಶಿಯನ್ ಹಸ್ತಪ್ರತಿ ಸಾಲಾರಜಂಗ ವಸ್ತು ಸಂಗ್ರಹಾಲಯ ಹೈದರಾಬಾದದಲ್ಲಿ ಲಭ್ಯ.

೧೭. **ಮೀರ ಅಹಮದ ಅಲಿ ಖಾನ: ಗುಲದಸ್ತಾ ಎ ಬಿಜಾಪುರ** [ದಖಣಿ]
ಆಂಧ್ರಪ್ರದೇಶ ಆರ್ಕೀವ್ಸದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೯೩.

೧೮. **ಅಬುಲ ಹಸನ ಕಾದಿರಿ : ಶಾಹಿಪತ್ ಇ ಹುದಾ [ಬಿಜಾಪುರ ಸೂಫಿ ಸಂತರ ಚರಿತ್ರೆ ೧೭೯೬]** [ಪರ್ಶಿಯನ್]
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೯. **ಆದಿಲಶಾಹಿಕಾಲದ ಫರ್ಮಾನುಗಳು:** ಭಾರತ ಇತಿಹಾಸ ಸಂಶೋಧಕ ಮಂಡಳ [ಸಾವಿರಕ್ಕೂ ಮಿಕ್ಕಿ] **ಮತ್ತು ಸನದುಗಳು** ಪುಣೆ ಮತ್ತು ಇತರ ಸ್ಥಳಗಳಲ್ಲಿ ಲಭ್ಯ.

ಹೀಗೆ ಪಟ್ಟಿ ಮಾಡಿ, ಹಸ್ತಪ್ರತಿಗಳ ಶೋಧಕ್ಕೆ ತೊಡಗಲಾಯಿತು. ಸಾಲಾರಜಂಗ ವಸ್ತು ಸಂಗ್ರಹಾಲಯ, ಆಂಧ್ರಪ್ರದೇಶ ಆರ್ಕೀವ್ಸ ಹೈದರಾಬಾದ, ಭಾರತೀಯ ಪುರಾತತ್ವ ಇಲಾಖೆ ವಸ್ತು ಸಂಗ್ರಹಾಲಯ, ಗೋಳಗುಮ್ಮಟ ಬಿಜಾಪುರ ಈ ಕೇಂದ್ರಗಳಲ್ಲಿ ಕೆಳಗಿನ ಹಸ್ತಪ್ರತಿಗಳು ದೊರೆತವು.

೧. ಕಾಜಿ ನೂರುಲ್ಲಾ : **ತಾರೀಖೆ ಅಲಿ ಆದಿಲಶಹ** [ದಖಣಿ]

೨. ಮೀರ್ ರಫೀಯುದ್ದೀನ ಶಿರಾಜಿ : **ತಧ್ಕಿರಾತ-ಅಲ್-ಮುಲ್ಕ** [ಪರ್ಶಿಯನ್]

೩. ಫಿತೂರಖಾನ ವಲ್ಲದ ಅಸದಖಾನ ಲ್ಯಾರಿಯ : ಹಪ್ತ ಕುರ್ಸೀ [ಪರ್ಶಿಯನ್]

೪. ಮೀರ ಅಹಮದ ಅಲಿ ಖಾನ : ಗುಲದಸ್ತಾ ಎ ಬಿಜಾಪುರ [ದಖಣಿ]

೫. ಜುಹೂರ್ ಬಿನ್ ಜುಹೂರಿ : ಮಹಮ್ಮದನಾಮಾ [ಪರ್ಶಿಯನ್]

ಇದಲ್ಲದೆ, ಫೆರಿಸ್ತಾನ ತಾರೀಖ-ಇ-ಫೆರಿಸ್ತಾದ ಇಂಗ್ಲಿಷ್ ಮತ್ತು ಉರ್ದು ಅನುವಾದ, ಅಬ್ದುಲ್ಲಾ ದೇಹಲವಿ ವಿರಚಿತ ಇಬ್ರಾಹೀಮನಾಮಾದ ಹಿಂದಿ ಮತ್ತು ಉರ್ದು ಅನುವಾದ, ಕವಿ ನುಸ್ರತಿಯ 'ಅಲಿನಾಮಾ' ಘುತೂಹತ್ ಅಲಂಗೀರದ ಇಂಗ್ಲಿಶ್ ಅನುವಾದ ಮತ್ತು ಹಲವು ನೂರು ಪರ್ಶಿಯನ್ ಮೂಲ ಮತ್ತು ಮರಾಠೀ ಅನುವಾದದ ಆದಿಲಶಾಹೀ ಫರ್ಮಾನುಗಳು ದೊರೆತವು. ಉಳಿದ ಹಸ್ತಪ್ರತಿಗಳನ್ನು ದೊರಕಿಸಬೇಕಾಗಿದೆ.

ಹೀಗೆ ಸಾಮಗ್ರಿಯನ್ನು ಸಂಗ್ರಹಿಸಿ ಅನುವಾದದ ಕೆಲಸ ಪ್ರಾರಂಭ ಮಾಡಲಾಯಿತು. ಕನ್ನಡ ಭಾಷೆಗೆ ಅನುವಾದ ಮಾಡುವ ಪರ್ಶಿಯನ್, ದಖಣಿ ಮತ್ತು ಉರ್ದು ಭಾಷೆಗಳನ್ನು ಬಲ್ಲ ಈ ಕೆಳಗಿನ ವಿದ್ವಾಂಸರನ್ನು ಅನುವಾದ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಯಿತು.

೧. ಮೌಲಾನಾ ಮಹಿಬೂಬುರ್ ರಹಮಾನ ಮದನಿ ವಿಜಯಪುರ.

೨. ಶ್ರೀ ಬಿ. ಜಯಾಚಾರ್ಯ, ನ್ಯಾಯವಾದಿಗಳು ಯಾದಗಿರಿ.

೩. ಶ್ರೀಮತಿ ಬಾನು ಮುಷ್ತಾಕ್ ನ್ಯಾಯವಾದಿಗಳು ಹಾಸನ.

೪. ಡಾ. ಅಬ್ದುಲ್ ಹಮೀದ, ಶಿಕ್ಷಣ ತಜ್ಞರು, ತಿಪಟೂರು.

೫. ಶ್ರೀ ಎಂ.ಎನ್ ನದಾಫ, ವಿಜಯಪುರ.

೬. ಪ್ರೊ ವಸಂತ ಕುಷ್ಟಗಿ, ಸಾಹಿತಿಗಳು ಕಲಬುರಗಿ.

೭. ಶ್ರೀಮತಿ ರತ್ನಾ ಮಣ್ಣೂರ, ಕಲಬುರಗಿ.

೮. ಡಾ. ಅಮೀರುದ್ದೀನ ಕಾಜಿ ವಿಜಯಪುರ.

೯. ಶ್ರೀ ಹಸನ ನಯೀಮ ಸುರಕೋಡ, ರಾಮದುರ್ಗ.

೧೦. ಡಾ. ಬಿ ರಘೋತ್ತಮರಾವ ದೇಸಾಯಿ, ಬೆಂಗಳೂರು.

೧೧. ಶ್ರೀಮತಿ ವಿದ್ಯಾ ಗುಮಾಸ್ತೆ, ವಿಜಯಪುರ.

೧೨. ಡಾ. ಆರ್.ಕೆ.ಕುಲಕರ್ಣಿ, ವಿಜಯಪುರ.

೧೩. ಡಾ. ಮುಹಮ್ಮದ ಸಿಬ್ಗತ್‌ಉಲ್ಲಾಹ್, ಬೆಂಗಳೂರು

೧೪. ಡಾ. ಮಹನೂರ್ ಜಮಾನಿ ಬೇಗಂ, ಬೆಂಗಳೂರು

೧೫. ಪ್ರೊ. ಎ.ಎಚ್. ಮಾಸಾಪತಿ, ಬೆಂಗಳೂರು

೧೬. ಫಕೀರ್ ಮುಹಮ್ಮದ ಕಟ್ಪಾಡಿ, ಬೆಂಗಳೂರು

೧೭. ಮೌಲಾನಾ ಸಯ್ಯದ್ ರಶೀದ್ ಅಲ್ ಖಾಸಿಮಿ, ಬೆಂಗಳೂರು

೧೮. ಶ್ರೀ ಬೋಡೆ ರಿಯಾಜ್ ಅಹ್ಮದ್ ತಿಮ್ಮಾಪುರಿ, ಕಲಬುರಗಿ.

ಈ ಮಹನೀಯರು ಅನುವಾದ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಇವರ ಸಹಕಾರದಿಂದ ಮೊದಲ ಹಂತವಾಗಿ ಈ ಕೆಳಗಿನ

೧. ತಾರೀಖ–ಇ–ಫೆರಿಸ್ತಾ : ೪ ಸಂಪುಟಗಳು.

೨. ಬುಸಾತಿನೆ ಸಲಾತೀನ : ೫ನೆಯ ಸಂಪುಟ.

೩. ಇಬ್ರಾಹೀಮ ನಾಮಾ [ದಖಣಿ], ಗುಲದಸ್ತಾಯೆ ಬಿಜಾಪುರ [ದಖಣಿ], ಹಪ್ತ ಕುರ್ಸಿ [ಪರ್ಶಿಯನ್], ಭಾಗಶಃ ಫುತುಹತೆ ಆಲಂಗೀರ ಇವೆಲ್ಲ ಸೇರಿ ೬ನೆಯ ಸಂಪುಟ.

೪. ಮೊಹಮ್ಮದನಾಮಾ, ೭ ನೆಯ ಸಂಪುಟ

೫. ಅಲಿನಾಮಾ–ತಾರೀಖೇ ಸಿಕಂದರಿ ೮ ನೆಯ ಸಂಪುಟ

೬. 'ಊರುಸೇ–ಇರ್ಫಾನ್' (ಮನ್ ಲಗನ್) ೯ನೆಯ ಸಂಪುಟ

೭. 'ತಝ್ಕಿರತುಲ್ ಮುಲೂಕ್(ಬಾದಶಾಹರ ಚರಿತ್ರೆ)' ೧೦ ನೆಯ ಸಂಪುಟ

೮. 'ಕಿತಾಬೆ ನವರಸ' ೧೧ ನೆಯ ಸಂಪುಟ

೯. ರೌಜತುಲ್ ಔಲಿಯಾಯೆ ಬಿಜಾಪುರ ೧೨ ನೆಯ ಸಂಪುಟ

ಹೀಗೆ ೧೨ ಸಂಪುಟಗಳು ಪ್ರಕಟವಾಗಿವೆ. ಇದೀಗ ೧೩ ನೆಯ ಸಂಪುಟವಾಗಿ ಡಾ. ಎಮ್. ಯಾಸೀನ ಕುದ್ದುಸಿ ಅವರು ಇಂಗ್ಲೀಷದಲ್ಲಿ ಸಂಪಾದಿಸಿದ 'ಕರ್ನಾಟಕದಲ್ಲಿಯ ಅರೇಬಿಕ್, ಪರ್ಶಿಯನ್ ಮತ್ತು ಉರ್ದು ಶಾಸನ ಸೂಚಿ' ಯ ಕನ್ನಡ ಅನುವಾದ ಕೃತಿಯು ಪ್ರಕಟವಾಗುತ್ತಿದೆ. ಇದನ್ನು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

'ಆದಿಲಶಾಹಿ ಸಾಹಿತ್ಯ ಅನುವಾದ' ಯೋಜನೆಗೆ ಅನುದಾನ ನೀಡಿದ ಕರ್ನಾಟಕ ಸರ್ಕಾರಕ್ಕೆ, ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವಲ್ಲಿ ಸಹಕರಿಸುತ್ತಿರುವ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಮತ್ತು ಈ ದಿಶೆಯಲ್ಲಿ ನಿರಂತರ ಸಹಾಯಹಸ್ತ ನೀಡುತ್ತಿರುವ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರಿಗೆ, ಸಂಶೋಧನ ಕೇಂದ್ರದ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆ ಅವರಿಗೆ ಕೃತಜ್ಞತೆಗಳು.

ಸಂಪುಟಗಳು ಪ್ರಕಟವಾಗುವ ಪ್ರತಿ ಹಂತದಲ್ಲಿ ಸಹಕಾರ ನೀಡಿದ, ಈ ಹಿಂದೆ ವಿಜಯಪುರ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಶಿವಯೋಗಿ ಕಳಸದ, ಶ್ರೀ ರಿತ್ವಿಕ್ ರಂಜನ್ ಪಾಂಡೆ, ಶ್ರೀ ಡಿ.ರಂದೀಪ ಮತ್ತು ಇಂದಿನ ಜಿಲ್ಲಾಧಿಕಾರಿಗಳಾದ ಶ್ರೀ ಕೆ.ಬಿ. ಶಿವಕುಮಾರ ಅವರನ್ನು, ಈ ಯೋಜನೆಯ ಸಮಿತಿಯ ಅಧ್ಯಕ್ಷರ ಮಾರ್ಗದರ್ಶನವನ್ನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರನ್ನು ಹಾಗೂ ಬಿ.ಎಲ್.ಡಿ.ಇ. ಸಂಸ್ಥೆಯ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಮದಭಾವಿ ಅವರ ಶ್ರಮವನ್ನು ಪ್ರೀತಿಯಿಂದ ನೆನೆಯುತ್ತೇವೆ.

ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟ್‌ನ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಯನ್ನು ನೆನೆಯುತ್ತೇವೆ.

■

*

ನಿರ್ದೇಶಕರ ಮಾತು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

'ಕರ್ನಾಟಕ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಸೂಚಿ' ಯು, ಈ ಯೋಜನೆಯ ಸಮಿತಿಯ ಅಧ್ಯಕ್ಷರಾಗಿದ್ದ ದಿವಂಗತ ಡಾ. ಎಂ ಎಂ ಕಲಬುರ್ಗಿ ಅವರ ಕನಸಿನ ಕೂಸು. ಸಮಿತಿಯ ಒಂದು ಸಭೆಗೆ ದೂರದ ನಾಗಪುರದಿಂದ ಡಾ. ಎಮ್ ಯಾಸೀನ ಕುದ್ದುಸಿ ಅವರನ್ನು ಕರೆಯಿಸಿ, ಈ ಪುಸ್ತಕದ ರೂಪು ರೇಷೆಗಳನ್ನು ಅಧ್ಯಕ್ಷರೇ ಹಾಕಿ ಕೊಟ್ಟಿದ್ದರು.

ಕ್ರಿ. ಶ. ೧೩೪೭ರಿಂದ ೧೯೪೭ರ ವರೆಗೆ ಸುಮಾರು ಆರು ನೂರು ವರುಷಗಳವರೆಗೆ ಮುಸ್ಲಿಮರು ಕರ್ನಾಟಕದ ಬಹು ಭಾಗವನ್ನು ಆಳಿದ್ದಾರೆ. ಅದಕ್ಕೂ ಮೊದಲೆಯೇ ಖಿಲಜಿಗಳು, ತುಘಲಕ್ ಮನೆತನಗಳು ಇಲ್ಲಿಗೆ ಬಂದು ಹೋಗಿದ್ದಾರೆ. ಅವರೆಲ್ಲ ನಾಡಿನ ತುಂಬ ತಮ್ಮ ಕಾರ್ಯಗಳನ್ನು ಶಾಸನ ರೂಪದಲ್ಲಿ ಇಲ್ಲಿಯೇ ಬಿಟ್ಟು ಹೋಗಿದ್ದಾರೆ. ಆಸ್ಥಾನ ಕವಿಗಳು, ಇತಿಹಾಸಕಾರರು ಅಂದಿನ ರಾಜಭಾಷೆ ಪರ್ಶಿಯನ್‌ದಲ್ಲಿ ಅನೇಕ ಗ್ರಂಥಗಳನ್ನು ಬರೆದಿಟ್ಟು ಹೋಗಿದ್ದರೂ ಅವುಗಳಲ್ಲಿ ತಮಗೆ ಆಶ್ರಯ ನೀಡಿದ ಬಾದಶಹರ ವೈಭವೀಕರಣಕ್ಕೆ, ಕಾಲ್ಪನಿಕತೆಗೆ ಅವಕಾಶ ಮಾಡಿಕೊಂಡಿದ್ದಾರೆ. ಶಾಸನಗಳಲ್ಲಿ ಅದಕ್ಕೆ ಅವಕಾಶ ಕಡಿಮೆ. ನಡೆದು ಹೋದ ಘಟನೆಯನ್ನು ಮಾತ್ರ ದಾಖಲಿಸಿದ್ದಾರೆ. ಈ ದೃಷ್ಟಿಯಿಂದ ಪ್ರಸ್ತುತ ಶಾಸನ ಸೂಚಿ ಕರ್ನಾಟಕ ರಾಜ್ಯದಲ್ಲಿ ಮುಸ್ಲಿಮರಿಂದ ನಡೆದು ಹೋದ ಅನೇಕ ಘಟನೆಗಳನ್ನು ಹೊಸದಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

ಕರ್ನಾಟಕದಲ್ಲಿಯ ಮೊಟ್ಟ ಮೊದಲಿನ ಪರ್ಶಿಯನ್ ಶಾಸನವನ್ನು ಚಿಕ್ಕಮಗಳೂರು ಜಿಲ್ಲೆಯ ಬುಡನಗಿರಿಯದೆಂದು ಹೇಳಲಾಗುತ್ತದೆ. ಅದು ಹಿಜರಿ ಶಕ ೩೯೬ ಅಂದರೆ ಕ್ರಿ. ಶ. ೧೦೦೫-೦೬ದ್ದೆಂದು ಗುರುತಿಸಲಾಗಿದೆ. ಜೊತೆಗೆ ಅದು ಈ ಮೊದಲಿನ

ಶಾಸನದ ನಕಲು ಎಂದೂ ಶಾಸನತಜ್ಞರು ಗುರುತಿಸಿದ್ದಾರೆ. ವಿಶೇಷವೆಂದರೆ ಆ ದಿನಗಳಲ್ಲಿ ಮುಸ್ಲಿಮರು ದಕ್ಷಿಣ ಭಾರತದಲ್ಲಿ ಇನ್ನೂ ಪ್ರವೇಶಿಸಿ ರಾಜ್ಯಭಾರ ಮಾಡುತ್ತಿರಲಿಲ್ಲ ಎಂಬುದು ಗಮನಾರ್ಹವಾಗಿದೆ.

ಅದೇನಿದ್ದರೂ ಅವರ ರಾಜ್ಯಭಾರದ ಅತ್ಯಂತ ಹಳೆಯ ಶಾಸನ ದಾಖಲಾಗಿದ್ದು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ನಾಲತವಾಡದ್ದು. ಅದು ಹಿಜರಿ ಶಕ ೭೧೫ರ ಜುಲ್‌ಕಾದಾ ೧ರಂದು ಅಂದರೆ ಕ್ರಿ.ಶ. ೧೩೧೫ರ ಜನವರಿ ೨೭ರಂದು ಬರೆದದ್ದು. ಅದೀಗ ಪತ್ತಿರದ ರಕ್ಕಸಗಿ ಗ್ರಾಮದಲ್ಲಿದೆ. ದೆಹಲಿಯ ಖಿಲಜಿ ಮನೆತನಕ್ಕೆ ಸಂಬಂಧ ಪಟ್ಟದ್ದಾಗಿದೆ. ಅನಂತರದ್ದು ಮುಂದಿನ ೫ ವರುಷಗಳಲ್ಲಿ ಮುಸ್ಲಿಮರು ಇಲ್ಲಿಯೇ ಶಾಶ್ವತವಾಗಿ ನೆಲೆಯೂರಿದ ವಿಜಯಪುರದ ಕರೀಮುದ್ದೀನ ಮಸೀದಿ ಶಾಸನ ಕ್ರಿ.ಶ. ೧೩೨೦-೨೧ರದ್ದು. ಹೀಗೆ ಮುಂದುವರಿದಿದೆ.

ಕರ್ನಾಟಕದಲ್ಲಿ ಒಟ್ಟು ಸುಮಾರು ೮೦೦ರಷ್ಟು ಪರ್ಶಿಯನ್, ಅರೇಬಿಕ್ ಉರ್ದು ಶಾಸನಗಳಿವೆಯೆಂದು ಈ ಹಿಂದೆ ವಿದ್ವಾಂಸರು ನಮೂದಿಸಿದ್ದಾರೆ. ಅವುಗಳಲ್ಲಿ ಬಹುತೇಕ ಪೂರ್ತಿಯಾಗಿ ಅಂದರೆ ೭೯೯ ಶಾಸನಗಳನ್ನು ಇಲ್ಲಿ ದಾಖಲಿಸಲಾಗಿದೆ. ಇವುಗಳಲ್ಲಿ ೧೨ ಶಾಸನಗಳನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ.

ಆದಿಲಶಾಹಿಗಳು (ಕ್ರಿ.ಶ. ೧೪೮೯-೧೬೮೬) ಸರಿ ಸುಮಾರು ಇನ್ನೂರು ವರುಷ ವಿಜಯಪುರವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದರು. ಅದರಲ್ಲಿ ಕ್ರಿ.ಶ. ೧೫೬೫ ರಿಂದ ೧೬೮೬ರ ವರೆಗೆ ೧೨೦ ವರುಷ ದಕ್ಷಿಣ ಭಾರತದ ಮೂರರಲ್ಲಿಯ ಎರಡು ಭಾಗದಷ್ಟು ಪ್ರದೇಶವನ್ನು ಆಳಿದರು. ಮುಂಬಯಿಯಿಂದ ತಂಜಾವರ ಉತ್ತರ ದಕ್ಷಿಣಗಳಲ್ಲಾದರೆ, ಗೋವೆಯಿಂದ ಕರ್ನೂಲವರೆಗೆ ಪಶ್ಚಿಮ ಪೂರ್ವಗಳಲ್ಲಿ ಅವರ ರಾಜ್ಯ ಹಬ್ಬಿತ್ತು. ಇಂದಿನ ಅಖಂಡ ಕರ್ನಾಟಕವನ್ನು ಅವರು ಕೆಲವು ವರುಷ ಆಳಿದ್ದಾರೆ. ಹೀಗಾಗಿ ಕರ್ನಾಟಕದಾದ್ಯಂತ ಅವರ ಶಾಸನಗಳು ದೊರೆಯುತ್ತವೆ. ಹೊರ ರಾಜ್ಯಗಳಲ್ಲೂ ಇರುವ ಸಾಧ್ಯತೆ ಇದೆ. ಇಲ್ಲಿ ಕರ್ನಾಟಕವನ್ನು ಗಮನದಲ್ಲಿಟ್ಟುಕೊಂಡು ಶಾಸನಗಳನ್ನು ಸಂಗ್ರಹಿಸಲಾಗಿದೆ.

ಆದಿಲಶಾಹಿಗಳು ಕರ್ನಾಟಕವನ್ನು ಆಳುತ್ತಿದ್ದಾಗ ಅವರ ಪ್ರಭಾವ ಎಲ್ಲೆಡೆಯಲ್ಲೂ ಇತ್ತು ಎನ್ನಲು ಒಂದೆರಡು ಉದಾಹರಣೆಗಳನ್ನು ನೋಡುವುದಾದರೆ, ಶಿವಮೊಗ್ಗ ಜಿಲ್ಲೆಯ ಮುಹಿದಿನಪುರ (ವಲಿಪುರ) ಶಾಸನವನ್ನು (ಶಾಸನ ಕ್ರಮ ಸಂಖ್ಯೆ ೭೫೮) ನೋಡಬೇಕು. ಈ ಶಾಸನ ಅಲ್ಲಿಯ ಬಡೇ ಸಾಹಿಬರ ಕೆರೆಯ ಮೇಲಿದೆ. ಶಾಸನದ ಕಾಲ, ಹಿಜರಿ ಶಕ ೧೦೬೪, ಕ್ರಿ. ಶ. ೧೬೫೩-೫೪ರದ್ದು. ಆಗ ವಿಜಯಪುರದಲ್ಲಿ ಮುಹಮ್ಮದ ಆದಿಲಶಹನು ಆಳುತ್ತಿದ್ದನು. ಆವನು ರೋಗಗ್ರಸ್ಥನಾಗಿ ಹಾಸಿಗೆಯನ್ನು

ಹಿಡಿದಾಗ, ಇಲ್ಲಿಂಯ ಹವಾಲದಾರನಾದ ಬಡೇ ಮಲಿಕನು ತನ್ನ ಪ್ರಭು ಗುಣಮುಖನಾಗಲು ಕೆರೆಯನ್ನು ಕಟ್ಟಿಸುವ ಹರಕೆಯನ್ನು ಹೊತ್ತನಂತೆ, ಅದರಂತೆ ಕೆರೆಯನ್ನು ಕಟ್ಟಿಸಿದ !

ಇನ್ನೊಂದು ಶಾಸನ (ಕ್ರಮ ಸಂಖ್ಯೆ ೭೫೪) ವಿಜಯಪುರ ಆದಿಲಶಾಹಿಯ ಕೊನೆಯ ಬಾದಶಹ ಸಿಕಂದರ ಆದಿಲಶಾಹನ ಕಾಲದ್ದು. ಶಿವಮೊಗ್ಗ ಜಿಲ್ಲೆಯ ಹೊನ್ನಾಳಿಯದ್ದು (ಈಗ ದಾವಣಗೆರೆ ಜಿಲ್ಲೆ) ಕ್ರಿ.ಶ. ೧೬೭೩ ಜನವರಿ ೯ರದ್ದು ಈಗ ಅಲ್ಲಿಯ ಜಾಮೀ ಮಸೀದಿಯಲ್ಲಿದೆ. ಶಾಸನ ಹೇಳುವಂತೆ ಸಿಕಂದರನು ಹೊನ್ನಾಳಿಯನ್ನು ದಿಯಾನತರಾಯನಿಗೆ ಜಹಗೀರು ಹಾಕಿ ಕೊಟ್ಟನು. ಅದರ ನೆನಪಿನಲ್ಲಿ ಗೋವಿಂದರಾಯನು ಒಂದು ಬುರುಜನ್ನು ಕಟ್ಟಿ ಅದಕ್ಕೆ ದಿಯಾನತ ಬುರುಜು ಎಂದು ಹೆಸರಿಟ್ಟನಂತೆ.

ಇನ್ನೆರಡು ಶಾಸನಗಳು ವಿಜಯಪುರದಲ್ಲಿದ್ದವುಗಳು. ಒಂದು ಚಂಗೀಪೀರ ದರ್ಗಾದಲ್ಲಿ ಇನ್ನೊಂದು ಖ್ವಾಜಾ ಅಮೀನ ದರ್ಗಾದಲ್ಲಿ ಎರಡೂ ಶಾಸನಗಳು (ಕ್ರಮ ಸಂಖ್ಯೆ ೩೧೩ ಮತ್ತು ೩೧೭) ಮುಹಮ್ಮದ ಆದಿಲಶಾಹನ ಕಾಲದ ಕ್ರಿ. ಶ. ೧೬೫೨ರವು. ಎರಡರ ವಿಷಯ ಒಂದೇ. ಅದು 'ಶ್ರೀಮಂತರು, ವ್ಯಾಪಾರಸ್ಥರು, ಸರಾಫರು, ಸಣ್ಣ-ದೊಡ್ಡ ಕಿರಾಣಿ ಅಂಗಡಿಯವರು ಸತ್ತರೆ ಅವರ ಆಸ್ತಿಯನ್ನು ಅವರ ವಂಶಸ್ಥರಿಗೆಯೆ ಕೊಡಬೇಕು. ಒಂದು ವೇಳೆ ಅವರ ವಂಶಸ್ಥರು ಇಲ್ಲವೆಂದಾದರೆ ಬಡ ಬಗ್ಗರಿಗೆ ಅವರ ಯೋಗ್ಯತಾನುಸಾರ ಹಂಚಬೇಕು. ಇದು ಹಿಂದು ಮುಸ್ಲಿಮ ಇಬ್ಬರಿಗೂ ಅನ್ವಯವಾಗುತ್ತದೆ.'

ಇನ್ನೊಂದು ಶಾಸನ (ಕ್ರಮ ಸಂಖ್ಯೆ ೩೧೯) ಈಗ ಪುರಾತತ್ವ ಇಲಾಖೆಯ ವಸ್ತು ಸಂಗ್ರಹಾಲಯದಲ್ಲಿದೆ. ಕ್ರಿ.ಶ. ೧೬೫೬ರವು. ನಗರದ ಬಡ ಕ್ಷೌರಿಕ ಸಮಾಜದವರೆಲ್ಲ ಸೇರಿ ಬಾದಶಹನನ್ನು ಕಂಡು ಕರ ವಿನಾಯತಿಯನ್ನು ಪಡೆದರು ಎಂದು ಉಲ್ಲೇಖಿಸಿದೆ. ಹೀಗೆ ಇನ್ನೂ ಹಲವಾರು ಶಾಸನಗಳು ಅಭ್ಯಾಸಕ್ಕೆ ಅರ್ಹವಾಗಿವೆ. ಜನರು ಜಾನುವಾರುಗಳ ಕಲ್ಯಾಣಕ್ಕಾಗಿ ಅಂದಿನ ಬಾದಶಹರು, ಸರದಾರರು, ಸಾಮಾನ್ಯ ಜನರು ಮೆಟ್ಟಿಲುಗಳುಳ್ಳ ಬಾವಿಗಳನ್ನು ಕಟ್ಟಿಸಿದ ಉದಾಹರಣೆಗಳು ಇವೆ.

ಬೀದರದ ಒಂದು ಶಾಸನ (ಕ್ರಮ ಸಂಖ್ಯೆ ೧೧೨) ಪರ್ಶಿಯನ್ ಮತ್ತು ಸಂಸ್ಕೃತ ಭಾಷೆಗಳಲ್ಲಿದೆ. ಕ್ರಿ.ಶ. ೧೪೪೪, ಸೆಪ್ಟೆಂಬರ್ ೨೮ರ ಶಾಸನ ಈಗ ಹೈದರಾಬಾದ ಪುರಾತತ್ವ ವಸ್ತು ಸಂಗ್ರಹಾಲಯದಲ್ಲಿದೆ. ಬಹಮನಿಯ ಅಹಮದಶಹನು ವಿಜಯನಗರದ ದೇವರಾಯನ ಮೇಲೆ ಗೆಲುವನ್ನು ಸಾಧಿಸಿದ್ದಕ್ಕೆ ಸಾರ್ವಜನಿಕರ ಉಪಯೋಗಕ್ಕಾಗಿ ಮೆಟ್ಟಿಲುಗಳುಳ್ಳ ಬಾವಿಯನ್ನು ಕಟ್ಟಿಸಿದನು.

ಟಿಪ್ಪು ಸುಲ್ತಾನನ ಕಾಲದ ಶಾಸನಗಳಲ್ಲಿ ಎರಡು ಶಾಸನಗಳು (ಕ್ರಮ ಸಂಖ್ಯೆ ೫೭೬ ಮತ್ತು ೫೯೬) ಒಂದು ಕೃಷ್ಣರಾಜ ಸಾಗರದ್ದು (ಕ್ರಿ.ಶ. ೧೭೯೮) ಇನ್ನೊಂದು ಶ್ರೀರಂಗಪಟ್ಟಣದ್ದು, (ಕ್ರಿ.ಶ. ೧೭೮೬) ಎರಡೂ ಒಂದೇ ವಿಷಯವನ್ನು ಹೇಳುತ್ತವೆ. ಅದೆಂದರೆ, 'ಬಂಜರು ಭೂಮಿಗಳಿಗೆ ನೀರಾವರಿಯನ್ನು ಮಾಡಲು ಕಾವೇರಿಗೆ ಅಡ್ಡಲಾಗಿ ಆಣೆಕಟ್ಟನ್ನು ಕಟ್ಟಲಾಯಿತು' ಇದು ಬಹುಶಃ ಹೊಸ ವಿಷಯ.

ಹೀಗೆ ಇನ್ನೂ ಅನೇಕ ಕುತೂಹಲ ವಿಷಯಗಳನ್ನೊಳಗೊಂಡ ಶಾಸನಗಳನ್ನು ಇಲ್ಲಿ ಕಾಣಬಹುದಾಗಿದೆ. ಚಿಕದೇವರಾಜರು, ಚಾಮರಾಜರು ಮೊದಲಾದ ಮೈಸೂರಿನ ಅರಸರು ತಮ್ಮ ಸಂಸ್ಥಾನದ ಹಲವೆಡೆಗಳಲ್ಲಿ ಮತ್ತು ಮೈಸೂರಲ್ಲೂ ಸಹ ಪರ್ಶಿಯನ್ ಭಾಷೆಯಲ್ಲಿ ಶಿಲಾ ಶಾಸನಗಳನ್ನು ಕೊರೆಯಿಸಿದ್ದಾರೆ. ಅದರಂತೆ ಕೊಡಗಿನ ರಾಜರು ಕೂಡ.

ಒಟ್ಟಾರೆಯಾಗಿ ಖಲಜಿಗಳ ಕಾಲದಿಂದ ಹಿಡಿದು ಮೈಸೂರು ಒಡೆಯರ ಕಾಲದವರೆಗೆ ಕರ್ನಾಟಕದಲ್ಲಿ ಆದ ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಆಡಳಿತಾತ್ಮಕ ವಿಷಯಗಳ ಬಗ್ಗೆ ಈ ಶಾಸನಗಳು ಹೊಸ ಬೆಳಕನ್ನು ಚೆಲ್ಲುತ್ತವೆ ಎಂಬುದರಲ್ಲಿ ಸಂಶಯವಿಲ್ಲ. ಇಂಥ ಅಪರೂಪದ ಸೂಚಿಯನ್ನು ಸಿದ್ಧಪಡಿಸಿಕೊಟ್ಟ ಡಾ. ಎಮ್. ಯಾಸೀನ ಕುದ್ದುಸಿ ಅವರಿಗೆ ಕೃತಜ್ಞತೆಗಳು. ಮೊದಲಿಗೆ ಹೇಳಿದಂತೆ ಇದು ಡಾ. ಎಂ.ಎಂ. ಕಲಬುರ್ಗಿಯವರ ಕನಸಾಗಿತ್ತು. ಕನ್ನಡ ಶಾಸನಗಳ ಇಂಥ ಹಲವಾರು ಸೂಚಿ, ಶಾಸನ ಸಂಗ್ರಹಗಳನ್ನು ಅವರು ಪ್ರಕಟಿಸಿದ್ದರು. ಈ ಪುಸ್ತಕ ಪ್ರಕಟವಾಗುವ ಮೊದಲೆ ಅವರು ನಮ್ಮನ್ನು ಅಗಲಿದರು. ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಈ ಶಾಸನ ಸೂಚಿಯನ್ನು ಅವರಿಗೆ ಸಮರ್ಪಿಸುತ್ತಿದ್ದೇವೆ.

ಕರಡುಪ್ರತಿಯನ್ನು ತಿದ್ದುವಲ್ಲಿ ಸಹಾಯ ನೀಡಿದವರು ಡಾ. ಎಂ.ಎಸ್. ಮದಭಾವಿ. ಈ ಯೋಜನೆಯನ್ನು ರೂಪಿಸುವಲ್ಲಿ, ಮುನ್ನಡೆಸುವಲ್ಲಿ ಉದ್ದಕ್ಕೂ ಮಾರ್ಗದರ್ಶನ ನೀಡಿದ ಮತ್ತು ಸಹಕಾರ ನೀಡಿದ ಸಮಿತಿಯ ಸದಸ್ಯರು, ಇವರೆಲ್ಲರಿಗೂ ಕೃತಜ್ಞತೆಗಳು. ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ. ಮಕಾಳಿ ಹಾಗೂ ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್‌ಪಾಯಿಂಟ್‌ದ ಶ್ರೀ ಬಿ.ಸಿ. ಪಾಟೀಲ(ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಯನ್ನು ನೆನೆಯುತ್ತೇನೆ.

■

LIST OF ABBREVATIONS / ಸಂಕೇತಗಳು

ARIE	:	Annual Report on Indian Epigraphy
ARISE	:	Annual Report on South Indian Epigraphy
BIDAR	:	Bidar, Its history and Monuments by (Dr.) Ghulam Yazdani
E.C.	:	Epigraphia Caranatica
EIAPS	:	Epigraphia Indica Arabic & Persian Supplement
EIM	:	Epigraphia Indo Moslemica
JAHS	:	Journal of Hyderabad Archeological Society
JBRAS	:	Journal of the Bombay Branch of the Royal Asiatic Society of Great Britain and Irland
JESI	:	Journal Epigraphical Society of India

KHUDADAD :	Tarikh-e-Saltanat-e-Khudadad, by Mahamud Bangalori.
PAUI OF :	Persian Arabic & Urdu Inscriptions of Karnataka, KARNATAKA by Dr. M. Yaseen Quddusi.
MEMOIR 49 :	Memoirs of the Archaelogical Survey of India, No.49 Bijapur Inscriptions by Dr. M. Nazim.
My PERSONAL :	By Dr. M. Yaseen Quddusi, Not Published DIARY RECORDS/ PHOTOGRAPHS
RMFAUK :	Riyasat-e-Mysore Ke Farsi Arabic Aur Urdu Katbe Ek Mutalea, by Mir Mahamud Husain
RANGAVALLI:	Rangavalli, Dr. S.R. Rao Fecilitation Volume.
SURYAKIRTI :	Suryakirti
WMB :	Waquiat-e-Mamlakat-e-Bijapur, by M. Bashiruddin Ahmad

■

*

ಪರಿವಿಡಿ

ಕರ್ನಾಟಕ ಪರ್ಶಿಯನ್/ಅರೇಬಿಕ್/ಉರ್ದು ಶಾಸನ ಸೂಚಿ

ಜಿಲ್ಲೆಗಳು ಮತ್ತು ಊರುಗಳು

೧. ಬೆಂಗಳೂರು ಜಿಲ್ಲೆ ೩–೨೨

೧. ಬೆಂಗಳೂರು ೩

೨. ದೊಡ್ಡಬಳ್ಳಾಪುರ ೨೧

೩. ರಾಮನಗರಮ್ ೨೨

೨. ಬೆಳಗಾವಿ ಜಿಲ್ಲೆ ೨೩–೪೬

೧. ಅಥಣಿ ೨೩

೨. ಬೆಳಗಾವಿ ೨೪

೩. ದೊನವಾಡ ೩೫

೪. ಗೋಕಾಕ ೩೫

೫. ಹಿರೆ ಕುಂಬಿ ೩೭

೬. ಹುಕ್ಕೇರಿ ೩೮

೭. ಕಾಗ್ನೋಳಿ ೪೦

೮. ಖರೋಶಿ ೪೧

೯. ಕುಡಚಿ ೪೨

೧೦. ರಾಯಬಾಗ ೪೩

೧೧. ತೊರಗಲ ೪೪

೩. ಬಳ್ಳಾರಿ ಜಿಲ್ಲೆ
೧. ಬಳ್ಳಾರಿ ೪೭
೨. ದರೋಜಿ ೫೬
೩. ಹೊಸಪೇಟ ೫೭
೪. ನಾರಾಯಣದೇವರ ಕೆರೆ
೫. ರಾರಾವಿ ೫೮
೬. ಸಂಡೂರ ೫೮
೭. ಸಿರಗುಪ್ಪಾ ೫೯

೪. ಬೀದರ ಜಿಲ್ಲೆ
೧. ಬಡೀ ಬೀದಿ ೬೩
೨. ಬೀದರ ೬೪
೩. ಚಂದಾಪುರ ೧೦೩
೪. ಚಿಲೇರ್ಗಿ ೧೦೩
೫. ಗೊರನಳ್ಳಿ ೧೦೪
೬. ಹುಮ್ನಾಬಾದ ೧೦೬
೭. ಕಲ್ಯಾಣಿ [ಬಸವ ಕಲ್ಯಾಣ] ೧೦೭
೮. ನಾರಾಯಣಪುರ ೧೨೭
೯. ನೌಬಾದ ೧೨೭
೧೦. ಉದಬಾಳ ೧೨೮

೫. ಬಿಜಾಪುರ ಜಿಲ್ಲೆ
೧. ಅಫಜಲಪುರ ೧೨೯
೨. ಐನಾಪುರ ೧೩೨
೩. ಬಬಲಾದ ೧೩೨
೪. ಬದಾಮಿ ೧೩೩
೫. ಬಾಗೇವಾಡಿ ೧೩೪
೬. ಬಿಜಾಪುರ ೧೩೫
೭. ಹಲಸಂಗಿ ೧೯೮
೮. ಜಮಖಂಡಿ ೧೯೮
೯. ಮಮದಾಪುರ ೨೦೦
೧೦. ಸಾಲತವಾಡ ೨೦೧

೧೧. ಪೀರಾಪುರ ೨೦೧
೧೨. ರಕ್ಕಸಗಿ ೨೦೨
೧೩. ತೋರಣಿ ೨೦೩
೧೪. ಉಟಗಿ ೨೦೩

೬. ಚಿಕ್ಕ ಮಗಳೂರು ಜಿಲ್ಲೆ
೧. ಬಾಬಾ ಬುಡನಗಿರಿ ೨೦೫
೨. ಬುಡನಗಿರಿ ೨೦೬
೩. ಚಿಕ್ಕಮಗಳೂರು ೨೦೭

೭. ಚಿತ್ರದುರ್ಗ ಜಿಲ್ಲೆ
೧. ಚಿತ್ರದುರ್ಗ ೨೦೯
೨. ಮೊಳಕಾಲಮೂರು ೨೧೩

೮. ಧಾರವಾಡ ಜಿಲ್ಲೆ
೧. ಬಂಕಾಪುರ ೨೧೫
೨. ಚನ್ನಾಪುರ ೨೨೨
೩. ಧಾರವಾಡ ೨೨೩
೪. ಗದಗ ೨೨೪
೫. ಹಾನಗಲ ೨೨೪
೬. ಹಾವೇರಿ ೨೨೬
೭. ಹುಬ್ಬಳ್ಳಿ ೨೨೭
೮. ಲಕ್ಷ್ಮೇಶ್ವರ ೨೨೭
೯. ಮಾಸೂರ ೨೨೯
೧೦. ಮಿಶ್ರಕೋಟಿ ೨೨೯
೧೧. ರಾಣೆಬೆನ್ನೂರ ೨೩೦
೧೨. ರಟ್ಟೀಹಳ್ಳಿ ೨೩೧
೧೩. ಸವಣೂರ ೨೩೨
೧೪. ಶಿರಹಟ್ಟಿ ೨೪೧

೯. ಗುಲಬರ್ಗಾ ಜಿಲ್ಲೆ
೧. ಆಳಂದ ೨೪೩
೨. ಬೋನಹಾಳ ೨೪೪
೩. ಚಿಂಚೋಳ್ಳಿ ೨೪೫

೪. ದೇವದುರ್ಗ ೨೪೭
೫. ದೋರನಹಳ್ಳಿ ೨೪೮
೬. ಫಿರೋಜಾಬಾದ ೨೪೯
೭. ಗೋಗಿ ೨೫೦
೮. ಗುಲಬರ್ಗಾ ೨೫೨
೯. ಗುಲಸರಮ ೨೭೮
೧೦. ಇತಿಬಾರಪುರ ೨೮೦
೧೧. ಕೆಂಭಾವಿ ೨೮೧
೧೨. ಮಳಖೇಡ ೨೮೩
೧೩. ಸಾಗರ ೨೮೩
೧೪. ಶಾಹಪುರ ೨೯೪
೧೫. ಶೋರಾಪುರ [ಸುರಪುರ] ೨೯೯
೧೬. ವಾಕನಗೆರೆ ೩೦೦
೧೭. ಯಾದಗೀರ ೩೦೦

೧೦. ಹಾಸನ ಜಿಲ್ಲೆ
೧. ಹಳೇಬೀಡು ೩೦೩
೨. ಹಾಸನ ೩೦೪
೩. ಮಂಜರಾಬಾದ ೩೦೫
೪. ಸಾಲಿಗ್ರಾಮ ೩೦೫

೧೧. ಕೋಲಾರ ಜಿಲ್ಲೆ
೧. ದೇವನಹಳ್ಳಿ ೩೦೯
೨. ಹೊಸೂರು ೩೧೦
೩. ಕೋಲಾರ ೩೧೦
೪. ಮೈಲಪುರ [ಮುಹಮ್ಮದಪುರ] ೩೨೦
೫. ಮುಳಬಾಗಿಲು ೩೨೨
೬. ನಂದಿ ೩೨೩

೧೨. ಮಂಡ್ಯ ಜಿಲ್ಲೆ
೧. ಬೆಳ್ಳೂರು ೩೨೫
೨. ದೊಡ್ಡಕ್ರಿಂಗೂರ ೩೨೬
೩. ಕೃಷ್ಣರಾಜ ಸಾಗರ ೩೨೭

೪. ಮಳವಳ್ಳಿ ೩೨೮
೫. ನಾಗಮಂಗಲ ೩೩೦
೬. ಪಾಂಡವಪುರ ೩೩೦
೭. ರಹಮತನಗರ ೩೩೧
೮. ಶ್ರೀರಂಗಪಟ್ಟಣ ೩೩೨

೧೩. ಮೈಸೂರು ಜಿಲ್ಲೆ
೧. ಮೈಸೂರು ೩೫೭
೨. ಸಾಲಿಗ್ರಾಮ ೩೬೭

೧೪. ಉತ್ತರ ಕನ್ನಡ ಜಿಲ್ಲೆ [ಕಾರವಾರ ಜಿಲ್ಲೆ]
೧. ಭಟಕಳ ೩೬೯
೨. ಕಾರವಾರ ೩೭೪

೧೫. ರಾಯಚೂರು ಜಿಲ್ಲೆ
೧. ಬಹಾದ್ದೂರ ಬಂಡಾ ೩೭೫
೨. ಗಂಗಾವತಿ ೩೭೬
೩. ಗುರಗುಂಟಾ ೩೭೮
೪. ಹನಮಸಾಗರ ೩೮೦
೫. ಜಲದುರ್ಗ ೩೮೧
೬. ಕನಕಗಿರಿ ೩೮೨
೭. ಕೊಪ್ಪಳ ೩೮೨
೮. ಕೋಟಾ [ಕಾತಿ] ೩೮೮
೯. ಕುಕನೂರ ೩೮೯
೧೦. ಕುಷ್ಟಗಿ ೩೯೦
೧೧. ಮಸ್ಕಿ ೩೯೦
೧೨. ರಾಯಚೂರು ೩೯೧
೧೩. ಯಲಬುರ್ಗಾ ೪೨೮

೧೬. ಶಿವಮೊಗ್ಗಾ ಜಿಲ್ಲೆ
೧. ಬಸವಾಪಟ್ಟಣ ೪೨೯
೨. ಚನ್ನಗಿರಿ ೪೩೦
೩. ಹೊನ್ನಾಳಿ ೪೩೦
೪. ಕವಲೇದುರ್ಗ ೪೩೧

ಬೆಂಗಳೂರು ಜಿಲ್ಲೆ
ಸ್ಥಳ – ಬೆಂಗಳೂರು

೧

ದೊರೆತ ಸ್ಥಳ : ವಿಶ್ವವಿದ್ಯಾಲಯ ರಸ್ತೆಯ ನವ್ವಾಬಿನ್ ಮೊಹಲ್ಲಾದ ಸರ ಕಾಜೀ ಮಸೀದಿ, ಬಿಡಿ ಕಲ್ಲಿನ ಮೇಲೆ

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೧೩೭ [ಕ್ರಿ. ಶ. ೧೭೨೪–೨೫]

ಭಾಷೆ : ಪರ್ಶಿಯನ್

ವಿಷಯ: ಮಸ್ಜಿದ–ಇ–ಸರ, ಕಾಜೀ ಮಸೀದಿಯನ್ನು ಬೆಂಗಳೂರಿನ ಕಾಜೀ ಮತ್ತು ಧರ್ಮದರ್ಶಿಗಳ ಪರವಾಗಿ ಮೊಹಮ್ಮದ ಬಿನ್ ಅಬಿದ ಶರೀಫ ಎಂಬವನು ಹಿಜರಿ ಶಕ ೧೧೩೭ರಲ್ಲಿ [ಕ್ರಿ. ಶ. ೧೭೨೪–೨೫] ಕಟ್ಟಿದನೆಂದು ಉಲ್ಲೇಖ. ಬರೆದವನು, ಅಬಿದ.

ಸಂದರ್ಭ/ಉಲ್ಲೇಖ :

೧. ಏಆರ್ಐಇ, ೧೯೭೦–೭೧, ಡಿ.೧೧೮.

೨. ಕರ್ನಾಟಕ ಪಿಎಯುಐದಲ್ಲಿ ಪಠ್ಯ ಪ್ರಕಟ. ಪುಟ– ೧ ೨. ಕರ್ನಾಟಕ ಪಿಎಯುಐದಲ್ಲಿ ಪಠ್ಯ ಪ್ರಕಟ. ಪುಟ– ೧

೩. ಆರ್ ಎಮ್ ಎಫ್ ಎ ಯುಕೆ, ಪುಟ– ೩೨

೨

ದೊರೆತ ಸ್ಥಳ : ತವಕ್ಕಲ ಮಸ್ತಾನ ಸಮಾಧಿ, ಚಿಕ್ಕಪೇಟೆ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೧೮೯ [ಕ್ರಿ. ಶ. ೧೭೭೫-೭೬]

ಭಾಷೆ : ಪರ್ಶಿಯನ್

ವಿಷಯ : ತವಕ್ಕಲ ಮಸ್ತಾನ ಪರ ಸ್ತುತಿಪದ್ಯಗಳು, ಮೇಲೆ ಹೇಳಿದ ವರುಷ ಸಮಾಧಿಯನ್ನು ಕಟ್ಟಿತು , ಬರೆದವನು ಕೈಫಿ

ಸಂದರ್ಭ/ಉಲ್ಲೇಖ:

೧ . ಕರ್ನಾಟಕ ಪಿಎಯುಐದಲ್ಲಿ ಪಠ್ಯ ಪ್ರಕಟ. ಪುಟ- ೨

೨. ಆರ್ ಎಮ್ ಎಫ್ ಎ ಯುಕೆ, ಪುಟ- ೯೭

೩

ದೊರೆತ ಸ್ಥಳ : ಮೂಲತಃ ಟಿಪ್ಪು ಸುಲ್ತಾನ ಅರಮನೆಯಲಿದ್ದು, ಈಗ ಬೆಂಗಳೂರು ವಸ್ತು ಸಂಗ್ರಹಾಲಯದಲ್ಲಿ.

ರಾಜ : ಟಿಪ್ಪು ಸುಲ್ತಾನ

ರಾಜ್ಯ : ಮೈಸೂರು ಸುಲ್ತಾನರು

ದಿನಾಂಕ : ಹಿಜರಿ ಶಕ ೧೨೦೬ [ಕ್ರಿ. ಶ. ೧೭೯೧-೯೨]

ಭಾಷೆ : ಪರ್ಶಿಯನ್

ವಿಷಯ : ಅರಮನೆ ಫಾರೂಕ ಮಹಲನ್ನು ಹಿಜರಿ ಶಕ ೧೧೯೬ [ಕ್ರಿ. ಶ ೧೭೮೧-೮೨] ರಲ್ಲಿ ಕಟ್ಟಿದ್ದೆಂದು, ಬಣ್ಣ ಮತ್ತು ಕಲಾವಂತಿಕೆಯ ಕೆಲಸವು ಹಿಜರಿ ಶಕ ೧೨೦೬ರಲ್ಲಿ ಕ್ರಿ.ಶ. ೧೭೯೧-೯೨ ಮುಗಿಯಿತೆಂದು ಉಲ್ಲೇಖ.

ಸಂದರ್ಭ/ಉಲ್ಲೇಖ :

೧. ಏಆರ್ ಈಇ, ೧೯೬೩-೬೪, ಡಿ.೨೪೨.

೨. ಕರ್ನಾಟಕ ಪಿಎಯುಐದಲ್ಲಿ ಪಠ್ಯ ಪ್ರಕಟ. ಪುಟ- ೨.

೩. ಆರ್ ಎಮ್ ಎಫ್ ಎ ಯುಕೆ, ಪುಟ- ೯೭

೪. ಇಸಿ ೯ರಲ್ಲಿ ಪಠ್ಯ, ಪುಟ- ೬, ನಂ, ೭

೫. ಖುದಾದಾದ, ಪುಟ- ೪೮೦-೮೧

೬

ದೊರೆತ ಸ್ಥಳ : ವಿಶ್ವವಿದ್ಯಾಲಯ ರಸ್ತೆಯ ನವ್ವಾಬಿನ್ ಮೊಹಲ್ಲಾದ ಸರ ಕಾಜೀ ಮಸೀದಿ, ದ್ವಾರದ ಮೇಲೆ

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೨೧೩ [ಕ್ರಿ. ಶ. ೧೭೯೮–೯೯]

ಭಾಷೆ : ಅರೇಬಿಕ್

ವಿಷಯ : ಕೇವಲ ಧಾರ್ಮಿಕ ವಿಷಯ.

ಸಂದರ್ಭ/ಉಲ್ಲೇಖ :

೧ ಏಆರ್ಐಇ, ೧೯೭೦–೭೧, ಡಿ.೧೧೯.

೫

ದೊರೆತ ಸ್ಥಳ : ಲಷ್ಕರದಲ್ಲಿರುವ ಜಾಮೀ ಮಸಿದಿಯ ಮಧ್ಯದಲ್ಲಿರುವ ಮಿಹರಾಬಿನ ಎಡಗಡೆಗೆ

ರಾಜ್ಯ :

ದಿನಾಂಕ : ಹಿಜರಿ ಶಕ ೧೨೪೪ [ಕ್ರಿ. ಶ. ೧೮೨೮–೨೯]

ಭಾಷೆ : ಪರ್ಶಿಯನ್

ವಿಷಯ : ಬೆಂಗಳೂರಿನ ಸೈನಿಕ ಪ್ರಮುಖನು ಮೇಲೆ ಹೇಳಿದ ವರುಷದಲ್ಲಿ ಕಟ್ಟಿದ ಮಸೀದಿಯ ಹೆಸರು ಮಸ್ಜಿದ–ಇ–ಜಾಮಿ ಜೈಶ್ ಎಂಬುದಾಗಿ ಉಲ್ಲೇಖ. ಶಾಸನದ ಪಠ್ಯವನ್ನು ಮೂರು ಜನ ಕವಿಗಳು ಬರೆದಿದ್ದಾರೆ. ಮುನ್ಶೀ ಶಾಹ ಮುಹಮ್ಮದ ಜಲಾಲ ಕಾದಿರಿ ಊರ್ಫ ವಫಾ, ಮುನ್ಶೀ ಕಾಜಿಮ್ ಅಲಿ ಮತ್ತು ಸಯ್ಯದ ಹಸನ, ಅಂಕಿತ ನಾಮ 'ರಫಿಕ್'

ಸಂದರ್ಭ/ಉಲ್ಲೇಖ :

೧. ಆರ್ ಎಮ್ ಎಫ್ ಎ ಯುಕೆ, ಪುಟ– ೯೮

೬

ದೊರೆತ ಸ್ಥಳ : ಲಷ್ಕರದಲ್ಲಿರುವ ವ್ಯಾಪಾರಿಗಳ ಮಸೀದಿಯ ಮುಖ್ಯ ದ್ವಾರದಲ್ಲಿರುವ ಶಾಸನ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೨೪೫ [ಕ್ರಿ. ಶ. ೧೮೨೯]

ಭಾಷೆ : ಪರ್ಶಿಯನ್

ವಿಷಯ : ಮಸೀದಿಯನ್ನು [ಇಬಾದತಖಾನಾ] ಕಟ್ಟಿದ ವರುಷ ಮೇಲೆ ಹೇಳಿದಂತೆ.

ಸಂದರ್ಭ/ಉಲ್ಲೇಖ :

೧. ಕರ್ನಾಟಕ ಪಿಎಯುಐದಲ್ಲಿ ಪತ್ಯ ಪ್ರಕಟ. ಪುಟ-೪.

೨. ಆರ್ ಎಮ್ ಎಫ್ ಎ ಯುಕೆ, ಪುಟ- ೧೦೦

೭

ದೊರೆತ ಸ್ಥಳ : ಮಹಲ ತಾರಾ ಮಂಡಲದಲ್ಲಿಯ ಸಂಗೀನ ಮಸೀದಿ. ಬಿಡಿ ಕಲ್ಲಿನ ಮೇಲೆ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೨೫೧ [ಕ್ರಿ. ಶ. ೧೮೩೫-೩೬]

ಭಾಷೆ : ಪರ್ಶಿಯನ್

ವಿಷಯ : ಮುಹಿಯುದ್ದೀನ ಅಲಿಖಾನ ಮೆಹಕರೀ, ಆನುವಂಶಿಕ ಆದರ್ಶಮನುಷ್ಯನಿಂದ ಮಸೀದಿಯ ದ್ವಾರಗಳು ಮತ್ತು ಹೆಚ್ಚಿನ ಕಮಾನುಗಳನ್ನು ಕಟ್ಟಿಸಿದ ಉಲ್ಲೇಖ.

ಸಂದರ್ಭ/ಉಲ್ಲೇಖ:

೧. ಏಆರ್ಐಇ, ೧೯೭೦-೭೧, ಡಿ.೧೧೭.

೨. ಕರ್ನಾಟಕ ಪಿಎಯುಐದಲ್ಲಿ ಪತ್ಯ ಪ್ರಕಟ. ಪುಟ -೪.

೮

ದೊರೆತ ಸ್ಥಳ : ಚಿಕ್ಕಪೇಟೆಯು ಬಾಬಾ ತವಕ್ಕಲ ಮಸ್ತಾನ ದರ್ಗಾ ಸಂಕೀರ್ಣದಲ್ಲಿಯ ಮುರಾದ ಬೀಬಿಯ ಸಮಾಧಿಯ ಮುಖ್ಯ ಪ್ರವೇಶದಲ್ಲಿಯ ಶಾಸನ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೨೬೩ [ಕ್ರಿ. ಶ. ೧೮೪೬]

ಭಾಷೆ : ಉರ್ದು

ವಿಷಯ : ಶೇಖ ಇಮಾಮ ಸುಬೇದಾರ ಸರದಾರ ಬಹಾದ್ದೂರನ ಹೆಂಡತಿ ಬೀಬಿ ಮುರಾದಳ ಮರಣದ ವರುಷ, ಮೇಲೆ ಹೇಳಿದಂತೆ ಉಲ್ಲೇಖ. ಬರೆದವನು ನಾಜಿಮ.

ಸಂದರ್ಭ/ಉಲ್ಲೇಖ :

೧. ಕರ್ನಾಟಕ ಪಿಎಯುಐದಲ್ಲಿ ಪತ್ಯ ಪ್ರಕಟ. ಪುಟ– ೬.

೩. ಆರ್ ಎಮ್ ಎಫ್ ಎ ಯುಕೆ, ಪುಟ– ೧೦೩

೯

ದೊರೆತ ಸ್ಥಳ : ಲಾಲ ಮಸೀದಿಯ ಮುಖ್ಯ ಪ್ರವೇಶದ ಮೇಲ್ಭಾಗದಲ್ಲಿ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೨೬೫ [ಕ್ರಿ. ಶ. ೧೮೪೮–೪೯]

ಭಾಷೆ : ಪರ್ಶಿಯನ್

ವಿಷಯ : ಇಬಾದತ ಖಾನಾ–ಇ–ಇಸ್ಲಾಮ [ಮಸೀದಿ] ಯನ್ನು ಮೇಲೆ ಹೇಳಿದ ವರುಷದಲ್ಲಿ ಕಟ್ಟಿದ ಉಲ್ಲೇಖ.

ಸಂದರ್ಭ/ಉಲ್ಲೇಖ :

೧. ಆರ್ ಎಮ್ ಎಫ್ ಎ ಯುಕೆ, ಪುಟ– ೧೦೪

೧೦

ದೊರೆತ ಸ್ಥಳ : ಲಾಲಮಸೀದಿಯ ಪೂರ್ವ ಗೋಡೆಯ ಪ್ರಾರ್ಥನಾ ಹಾಲ್‌ನಲ್ಲಿ ಬಲಗಡೆಗೆ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೨೬೫ [ಕ್ರಿ. ಶ. ೧೮೪೮-೪೯]

ಭಾಷೆ : ಅರೇಬಿಕ್

ವಿಷಯ : ಮೇಲೆ ಹೇಳಿದ ವರುಷದಲ್ಲಿ ಮಸೀದಿಯನ್ನು ಕಟ್ಟಲು ಮಾರೂಫನಿಗೆ ಒಪ್ಪಿಸಿದ ಉಲ್ಲೇಖ.

ಸಂದರ್ಭ/ಉಲ್ಲೇಖ :

೧. ಆರ್ ಎಮ್ ಎಫ್ ಎ ಯುಕೆ, ಪುಟ- ೧೦೪

೧೧

ದೊರೆತ ಸ್ಥಳ : ಲಾಲಮಸೀದಿಯ ಪೂರ್ವ ಗೋಡೆಯ ಎಡಗಡೆಗೆ

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೨೬೫ [ಕ್ರಿ. ಶ. ೧೮೪೮-೪೯]

ಭಾಷೆ : ಪರ್ಶಿಯನ್

ವಿಷಯ : ಮೇಲೆ ಹೇಳಿದ ವರುಷದಲ್ಲಿ ಮಸೀದಿಯನ್ನು ಕಟ್ಟಲು ಮಾರೂಫನಿಗೆ ಒಪ್ಪಿಸಿದ ಉಲ್ಲೇಖವಲ್ಲದೆ, ಮಸೀದಿಯಲ್ಲಿ ಸಭಾಗೃಹವಿದ್ದು ಮತ್ತು ಚಚ್ಚೌಕಾದ ಪುಷ್ಕರಣಿಯೂ ಇದೆ ಎಂದು ಉಲ್ಲೇಖಿಸುತ್ತದೆ..

ಸಂದರ್ಭ/ಉಲ್ಲೇಖ :

೧. ಆರ್ ಎಮ್ ಎಫ್ ಎ ಯುಕೆ, ಪುಟ- ೧೦೪

೧೨

ದೊರೆತ ಸ್ಥಳ : ಬೆಂಗಳೂರು ಈದ್ಗಾದ ಮುಖ್ಯ ದ್ವಾರದ ಎಡಗಡೆಯ ಶಾಸನ

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೨೮೦ [ಕ್ರಿ. ಶ. ೧೮೬೩]

ಭಾಷೆ : ಉರ್ದು ಮತ್ತು ಪರ್ಶಿಯನ್

ವಿಷಯ : ಮೇಲೆ ಹೇಳಿದ ವರುಷ ಬೆಂಗಳೂರು ದಂಡು ಪ್ರದೇಶದಲ್ಲಿ ಲಬ್ಬೇನ ಸಮಾಜಕ್ಕಾಗಿ ಕಟ್ಟಿದ ಇದಗಾ ಕುರಿತು ಉಲ್ಲೇಖಿಸುತ್ತದೆ. ಮುಂದುವರಿದು ಈ ಕೆಲಸವನ್ನು ಸಮಾಜದ ಹೈದರ ಸಾಹೇಬರಿಂದ ಮಾಡಲಾಯಿತೆಂದು ಹಾಗೂ ಅದನ್ನು ಇದಗಾ–ಇ–ಹೈದರಿ ಎಂದು ಕರೆಯಿತಲಾಯಿತೆಂದು ಹೇಳಿದೆ.

ಸಂದರ್ಭ/ಉಲ್ಲೇಖ :

೧. ಆರ್ ಎಮ್ ಎಫ್ ಎ ಯುಕೆ, ಪುಟ– ೧೦೪

೨. ಕರ್ನಾಟಕ ಪಿಎಯುಐ ದಲ್ಲಿ ಪತ್ಯ ಪ್ರಕಟ ಪುಟ– ೬

೧೩

ದೊರೆತ ಸ್ಥಳ : ಜಯಮಹಲ ರಸ್ತೆಯ ಕುದ್ದುಸ ಸಾಹೇಬರ ಸ್ಮಶಾನದಲ್ಲಿ, ನೌಕಲ ಶಾಹರ ದರ್ಗಾದ ಹತ್ತಿರದ ಸಮಾಧಿಯ ಮುಖ್ಯಕಲ್ಲಿನಮೇಲೆ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೨೮೭ [ಕ್ರಿ. ಶ. ೧೮೭೦–೭೧]

ಭಾಷೆ : ಪರ್ಶಿಯನ್

ವಿಷಯ : ಒಬ್ಬರ ಮರಣವನ್ನು ಉಲ್ಲೇಖಿಸುತ್ತದೆ. [ಹೆಸರು ಅಸ್ಪಷ್ಟವಾಗಿದೆ].

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೭೮–೭೯, ಡಿ ೪೩.

೧೪

ದೊರೆತ ಸ್ಥಳ : ಜಯಮಹಲ ರಸ್ತೆಯ ಕುದ್ದುಸ ಸಾಹೇಬರ ಸ್ಮಶಾನದಲ್ಲಿ, ಗೋರಿಯ ಮುಖ್ಯ ಕಲ್ಲಿನಮೇಲೆ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೨೯೦ ೨೪೧ Qoda, ೨೦ [ಕ್ರಿ.ಶ.೧೮೭೪, ಜನವರಿ ೯]

ಭಾಷೆ : ಪರ್ಶಿಯನ್

ವಿಷಯ : ಮೇಲೆ ಹೇಳಿದ ವರುಷದಲ್ಲಿ ಮುಹಮ್ಮದ ಪೀರರ ಮಗಳು ಅಮಿ ರಬಿ ಸತ್ತ ಉಲ್ಲೇಖ

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೭೮-೭೯, ಡಿ-೫೩

೧೫

ದೊರೆತ ಸ್ಥಳ : ಜಯಮಹಲ ರಸ್ತೆಯ ಕುದ್ದುಸ ಸಾಹೇಬರ ಸ್ಮಶಾನದಲ್ಲಿ, ಗೋರಿಯ ಮುಖ್ಯ ಕಲ್ಲಿನಮೇಲೆ

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೨೯೦ ಮೊಹರಮ್, ೧೧ [ಕ್ರಿ. ಶ. ೧೮೭೨, ಮಾರ್ಚ ೧೧]

ಭಾಷೆ : ಪರ್ಶಿಯನ್

ವಿಷಯ : ಮೇಲೆ ಹೇಳಿದ ವರುಷದಲ್ಲಿ ವಿದ್ಯಾರ್ಥಿಯಾಗಿದ್ದ ಮುಹಮ್ಮದ ಜಲಾಲ ಎಂಬ ಯುವಕನು ತನ್ನ ೧೯ನೆಯ ವರುಷದಲ್ಲಿ ಮರಣ ಹೊಂದಿದ ಉಲ್ಲೇಖ. ಬರೆದವನು ಆತನ ತಂದೆ ಶಾಹ ಅಬ್ದುಲ್ ಕುದ್ದುಸ ಕಾದಿರ.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೭೮-೭೯, ಡಿ ೪೨

೧೬

ದೊರೆತ ಸ್ಥಳ : ಜಯಮಹಲ ರಸ್ತೆಯ ಕುದ್ದುಸ ಸಾಹೇಬರ ಸ್ಮಶಾನದಲ್ಲಿ, ಗೋರಿಯ ಮುಖ್ಯ ಕಲ್ಲಿನಮೇಲೆ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೨೯೧, ಮೊಹರಮ್ ೫ [ಕ್ರಿ. ಶ. ೧೮೭೪, ಫೆಬ್ರವರಿ ೨೨]

ಭಾಷೆ : ಪರ್ಶಿಯನ್

ವಿಷಯ : ಮೇಲೆ ಹೇಳಿದ ವರುಷದಲ್ಲಿ ಮುಹಿಯುದ್ದೀನ ಬಿ ಸತ್ತ ಉಲ್ಲೇಖ

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೭೮-೭೯, ಡಿ ೫೪

೧೭

ದೊರೆತ ಸ್ಥಳ : ಜಯಮಹಲ ರಸ್ತೆಯ ಕುದ್ದುಸ ಸಾಹೇಬರ ಸ್ಮಶಾನದಲ್ಲಿ, ಗೋರಿಯ ಮುಖ್ಯ ಕಲ್ಲಿನಮೇಲೆ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೨೯೪ ಜುಲ್-ಹಿಜ್ಜಾ, ೨ [ಕ್ರಿ. ಶ. ೧೮೭೭, ಡಿಸೆಂಬರ್ ೮]

ಭಾಷೆ : ಪರ್ಶಿಯನ್

ವಿಷಯ : ಮೇಲೆ ಹೇಳಿದ ವರುಷದಲ್ಲಿ ಖಾಟಿಕ್ ಸಮಾಜದ ಸಯ್ಯದ ಅಜಮ್ ಶಾಹ ಕಂಧಾರಿಯ ಮಗ ಸಯ್ಯದ ಅಬ್ದುಲ್ ಕರೀಮ ಜಾನ್ ಮರಣ ಹೊಂದಿದ ಉಲ್ಲೇಖ ಜೊತೆಗೆ ಆತನು ಹಿಜರಿ ಶಕ ೧೨೬೬ [ಕ್ರಿ.ಶ. ೧೮೪೯-೫೦] ರಲ್ಲಿ ಹುಟ್ಟಿದನೆಂದೂ ಹೇಳಲಾಗಿದೆ.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೭೮-೭೯, ಡಿ ೪೭

೧೮

ದೊರೆತ ಸ್ಥಳ : ಜಯಮಹಲ ರಸ್ತೆಯ ಕುದ್ದುಸ ಸಾಹೇಬರ ಸ್ಮಶಾನದಲ್ಲಿ, ಗೋರಿಯ ಮುಖ್ಯ ಕಲ್ಲಿನಮೇಲೆ

ರಾಜ :

ರಾಜ್ಯ ;

ದಿನಾಂಕ : ಹಿಜರಿ ಶಕ ೧೨೯೫ [ಕ್ರಿ. ಶ. ೧೮೭೮]

ಭಾಷೆ : ಪರ್ಶಿಯನ್

ವಿಷಯ : ಮೇಲೆ ಹೇಳಿದ ವರುಷದಲ್ಲಿ ಮುಹಮ್ಮದ ಖಾನನ ಹೇಂಡತಿ ಹಮಿದಾ ಬಿ ಮರಣ ಹೊಂದಿದ ಉಲ್ಲೇಖ

ಸಂದರ್ಭ/ಉಲ್ಲೇಖ:

೧. ಎಆರ್ ಐಇ ೧೯೭೮-೭೯, ಡಿ-೫೦

೧೯

ದೊರೆತ ಸ್ಥಳ : ಜಯಮಹಲ ರಸ್ತೆಯ ಕುದ್ದುಸ ಸಾಹೇಬರ ಸ್ಮಶಾನದಲ್ಲಿ, ಗೋರಿಯ ಮುಖ್ಯ ಕಲ್ಲಿನಮೇಲೆ

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೨೯೫ [ಕ್ರಿ. ಶ. ೧೮೭೮]

ಭಾಷೆ : ಪರ್ಶಿಯನ್

ವಿಷಯ : ಮೇಲೆ ಹೇಳಿದ ವರುಷದಲ್ಲಿ ಅವನ ಮಗನ ಮದುವೆಯ ದಿನದಂದೇ ಕಾದಿರ ಶರೀಫರ ಹೆಂಡತಿ ಫಾಹಿಮಾ ಬಿ ಮರಣ ಹೊಂದಿದ ಉಲ್ಲೇಖ

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೭೮-೭೯, ಡಿ.೫೧

೨೦

ದೊರೆತ ಸ್ಥಳ : ಜಯಮಹಲ ರಸ್ತೆಯ ಕುದ್ದುಸ ಸಾಹೇಬರ ಸ್ಮಶಾನದಲ್ಲಿ, ಗೋರಿಯ ಮುಖ್ಯ ಕಲ್ಲಿನಮೇಲೆ.

ರಾಜ :

ರಾಜ್ಯ ;

ದಿನಾಂಕ : ಹಿಜರಿ ಶಕ ೧೨೯೫ [ಕ್ರಿ. ಶ. ೧೮೭೮]

ಭಾಷೆ : ಉರ್ದು ಮತ್ತು ಪರ್ಶಿಯನ್

ವಿಷಯ : ಮೇಲೆ ಹೇಳಿದ ವರುಷದಲ್ಲಿ ಶೇಖ ಮುಹಮ್ಮದ ಅಕ್ಬರ ಮರಣ ಹೊಂದಿದ ಉಲ್ಲೇಖ

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೭೮-೭೯, ಡಿ ೫೨

೨೧

ದೊರೆತ ಸ್ಥಳ : ಜಯಮಹಲ ರಸ್ತೆಯ ಕುದ್ದುಸ ಸಾಹೇಬರ ಸ್ಮಶಾನದಲ್ಲಿ, ಗೋರಿಯ ಮುಖ್ಯ ಕಲ್ಲಿನಮೇಲೆ '.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೨೯೬ ರಮಜಾನ ೧೨ [ಕ್ರಿ.ಶ.೧೮೭೯, ಅಗಸ್ಟ್ ೩೦]

ಭಾಷೆ : ಪರ್ಶಿಯನ್

ವಿಷಯ : ಮೇಲೆ ಹೇಳಿದ ವರುಷದಲ್ಲಿ ಮೀರ್ ಯುಸುಫ್ ಮುನಶೀ ಮರಣಹೊಂದಿದ ಉಲ್ಲೇಖ ಬರೆದವನು ದರವಿಶ್

ಸಂದರ್ಭ/ಉಲ್ಲೇಖ:

೧. ಎಆರ್ ಐಇ ೧೯೭೮-೭೯, ಡಿ-೪೫

೨೨

ದೊರೆತ ಸ್ಥಳ : ಜಯಮಹಲ ರಸ್ತೆಯ ಕುದ್ದುಸ ಸಾಹೇಬರ ಸ್ಮಶಾನದಲ್ಲಿ, ಗೋರಿಯ ಮುಖ್ಯ ಕಲ್ಲಿನಮೇಲೆ.

ರಾಜ :

ರಾಜ್ಯ ;

ದಿನಾಂಕ : ಹಿಜರಿ ಶಕ ೧೨೯೮, ಮೊಹರಮ್, ೧೩ ಶುಕ್ರವಾರ ಬೆಳಿಗ್ಗೆ [ಕ್ರಿ. ಶ. ೧೮೮೦, ಡಿಸೆಂಬರ್ ೧೬]

ಭಾಷೆ : ಉರ್ದು

ವಿಷಯ : ಮೇಲೆ ಹೇಳಿದ ವರುಷದಲ್ಲಿ ೩೦ನೆಯ ರೆಜಿಮೆಂಟಿನ ಗುಲಾಮ್ ಮುಹಿಯುದ್ದೀನ, ನಾಯಿಕ ಮರಣ ಹೊಂದಿದ ಉಲ್ಲೇಖ

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೭೮–೭೯, ಡಿ.೪೯

೨೩

ದೊರೆತ ಸ್ಥಳ : ಜಯಮಹಲ ರಸ್ತೆಯ ಕುದ್ದುಸ ಸಾಹೇಬರ ಸ್ಮಶಾನದಲ್ಲಿ, ಗೋರಿಯ ಮುಖ್ಯ ಕಲ್ಲಿನಮೇಲೆ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೨೯೯ ರಬಿ ॥ ೨೬, [ಕ್ರಿ. ಶ. ೧೮೮೨, ಮಾರ್ಚ ೧೭]

ಭಾಷೆ : ಉರ್ದು

ವಿಷಯ : ಮೇಲೆ ಹೇಳಿದ ವರುಷದಲ್ಲಿ ೨೭ನೆಯ ರೆಜಿಮೆಂಟಿನ ಶೇಖ ಇಮಾಮ ಸುಬೇದಾರನ ಮಗ ಶೇಖ ಸುಲ್ತಾನ ಸುಬೇದಾರ ಮೇಜರನು ಮರಣ ಹೊಂದಿದ ಉಲ್ಲೇಖ

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೭೮–೭೯. ೪೪

೨೪

ದೊರೆತ ಸ್ಥಳ : ಲಷ್ಕರದಲ್ಲಿರುವ ಜಾಮೀ ಮಸೀದೆಯ ಮಧ್ಯ ಮಿಹರಾಬಿನ ಬಲ ಭಾಗದಲ್ಲಿ.

ರಾಜ :

ರಾಜ್ಯ : ಮತ್ತು ೯ Chronograms

ದಿನಾಂಕ : ಹಿಜರಿ ಶಕ ೧೩೦೧, [ಕ್ರಿ. ಶ. ೧೮೮೩–೮೪]

ಭಾಷೆ : ಉರ್ದು ಮತ್ತು ಪರ್ಶಿಯನ್

ವಿಷಯ : ಮೇಲೆ ಹೇಳಿದ ವರುಷದಲ್ಲಿ ಅಹಲ್–ಇ–ಸುನ್ನತ ಸಮಾಜದಿಂದ ಜಾಮಿ ಮಸೀದೆಯನ್ನು ಕಟ್ಟಿದ ಉಲ್ಲೇಖದೊಂದಿಗೆ ಬು ಬೇಕರನ ಮಗ ಅಬ್ದುಲ್ಲಾ ಮತ್ತು ಅಬ್ದುಲ್ಲಾನ ಮಗ ಜಾನ ಮುಹಮ್ಮದರ ಹೆಸರುಗಳ ಉಲ್ಲೇಖವೂ ಇದೆ. ಕೆಲಸ ಪ್ರಾರಂಭಿಸದ ಮತ್ತು ಮುಕ್ತಾಯದ ದಿನಗಳೂ ಇವೆ. ಬರೆದವನು ನಾಜಿರ್.

ಸಂದರ್ಭ/ಉಲ್ಲೇಖ :

೧. ಆರ್‌ಎಮ್ ಎಫ್ ಯು ಎ ಕ ಪುಟ– ೯

೨೫

ದೊರೆತ ಸ್ಥಳ : ಜಯಮಹಲ ರಸ್ತೆಯ ಕುದ್ದುಸ ಸಾಹೇಬರ ಸ್ಮಶಾನದಲ್ಲಿ, ಗೋರಿಯ ಮುಖ್ಯ ಕಲ್ಲಿನಮೇಲೆ.

ರಾಜ :

ರಾಜ್ಯ ;

ದಿನಾಂಕ : ಹಿಜರಿ ಶಕ ೧೩೦೧ [ಕ್ರಿ. ಶ. ೧೮೮೩–೮೪]

ಭಾಷೆ : ಪರ್ಶಿಯನ್

ವಿಷಯ : ಮೇಲೆ ಹೇಳಿದ ವರುಷದಲ್ಲಿ ಮಖದುಮ್ ಶರೀಫ ಸುಬೇದಾರನ ಮರಣದ ಉಲ್ಲೇಖ ಬರೆದವನು ಕಾಜೀಮ್

ಸಂದರ್ಭ/ಉಲ್ಲೇಖ:

೧. ಎಆರ್ ಐಇ ೧೯೭೮–೭೯, ಡಿ. ೯

೨೬

ದೊರೆತ ಸ್ಥಳ : ಜಯಮಹಲ ರಸ್ತೆಯ ಕುದ್ದುಸ ಸಾಹೇಬರ ಸ್ಮಶಾನದಲ್ಲಿ, ಗೋರಿಯ ಮುಖ್ಯ ಕಲ್ಲಿನಮೇಲೆ .

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೩೦೧, ಜುಲ್‌ಶ್ವದಾ ೨೧, ಶುಕ್ರವಾರ (ಕ್ರಿ.ಶ.೧೮೮೪ ಸಪ್ಟೆಂಬರ್ ೧೨)

ಭಾಷೆ : ಪರ್ಶಿಯನ್

ವಿಷಯ : ಮೇಲೆ ಹೇಳಿದ ವರುಷದಲ್ಲಿ ಖಾನ ಕಂಧಾರಿಯ ಮರಣದ ಉಲ್ಲೇಖ

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೭೮-೭೯, ಡಿ. ೪೬

೨೭

ದೊರೆತ ಸ್ಥಳ : ಕಬ್ಬನ ಪಾರ್ಕಿನಲ್ಲಿಯ ಮಹಾರಾಜಾ ಚಾಮರಾಜೇಂದ್ರ ಒಡೆಯರ ವಿಗ್ರಹದ ಮೇಲಿನ ಶಾಸನ

ರಾಜ : ಮಹಾರಾಜಾ ಚಾಮರಾಜೇಂದ್ರ ಒಡೆಯರ್

ರಾಜ್ಯ : ಮೈಸೂರಿನ ಮಹಾರಾಜರು

ದಿನಾಂಕ : ಹಿಜರಿ ಶಕ ೧೩೧೨ [ಕ್ರಿ. ಶ. ೧೮೯೪]

ಭಾಷೆ : ಉರ್ದು

ವಿಷಯ : ಹಿಸ ಹೈನೆಸ್ ಶ್ರೀ ಚಾಮರಾಜೇಂದ್ರ ವಡೆಯರ್ ಬಿಸಿಎಸ್‌ಐ ಮಹಾರಾಜಾ ಮೈಸೂರು, ಕ್ರಿ.ಶ.೧೮೮೧-೧೮೯೪ ಎಂದು ಬರೆದಿದೆ.

ಸಂದರ್ಭ/ಉಲ್ಲೇಖ:

೧. ಆರ್‌ಎಮ್ ಎಫ್ ಯು ಎ ಕೆ ಪುಟ- ೧೨೩

೨೮

ದೊರೆತ ಸ್ಥಳ : ಮೈಸೂರು ರಸ್ತೆಯ ಬಡಾಮಕಾನ ಸ್ಮಶಾನದಲ್ಲಿ, ಗೋರಿ ನಂ ೧೮ರ ತಲೆ ಕಲ್ಲಿನಮೇಲೆ.

ರಾಜ :

ರಾಜ್ಯ ;

ದಿನಾಂಕ : ಹಿಜರಿ ಶಕ ೧೩೧೭, ಜುಮಾದಾ, ॥, ೨೬, ಬುಧವಾರ [ಕ್ರಿ. ಶ. ೧೮೯೯, ನವೆಂಬರ, ೧]

ಭಾಷೆ : ಉರ್ದು

ವಿಷಯ : ಮೇಲೆ ಹೇಳಿದ ವರುಷದಲ್ಲಿ ಹಾಥರಸದ [ಹಾಥರಸ ಅಲಿಗಡ ಜಿಲ್ಲೆ ಯುಪಿ] ಮಿಸ್ತ್ರಿ ಅಬ್ದುಲ್ಲಾಹ ಖಾನ ಹಾಥರಸಿಯ ಮಗಳು ಬೀಬೀ ಹಾಲಿಮಾ ಬೇಗವ್‌ಳ ಮರಣದ ಉಲ್ಲೇಖ. ಮುಂದುವರಿದು, ಮರಣಹೊಂದಿದವಳ ಸಹೋದರರೆಂದು ಮುಹಮ್ಮದ ಇಮಾಮ ಖಾನ, ಮಿಸ್ತ್ರಿ ಮುಹಮ್ಮದ ಹುಸೇನ ಖಾನ ಮತ್ತು ಮಿಸ್ತ್ರಿ ಮುಹಮ್ಮದ ಲಾಲ ಖಾನರ ಹೆಸರುಗಳನ್ನೂ ಉಲ್ಲೇಖಿಸಲಾಗಿದೆ.

ಸಂದರ್ಭ/ಉಲ್ಲೇಖ:

೧. ಎಆರ್ ಐಇ ೧೯೬೪-೬೫, ಸಿ.೫೭[೨] ವೈಯಕ್ತಿಕ ದಿನಚರಿ ಉಲ್ಲೇಖ

೨೯

ದೊರೆತ ಸ್ಥಳ : ಬಡಾ ಮಕಾನ ಸ್ಮಶಾನದಲ್ಲಿ, ಗೋರಿ ನಂ ೨

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೩೨೦, ಜುಲ್-ಹಿಜ್ಜಾ ೬, ಶುಕ್ರವಾರ [ಕ್ರಿ. ಶ. ೧೯೦೩, ಮಾರ್ಚ್ ೬]

ಭಾಷೆ : ಉರ್ದು

ವಿಷಯ : ಮೇಲೆ ಹೇಳಿದ ವರುಷದಲ್ಲಿ ಸಂತ ಸಯ್ಯದ ಮಹಮುದ ಶಾಹನ ಮರಣದ ಉಲ್ಲೇಖ. ಅವರು ಮಕ್ಕಾ ಮದೀನಾ ಯಾತ್ರೆ ಮಾಡಿದ್ದರು

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೪೪-೯೫, ಸಿ.೫೮ ೨. ವೈಯಕ್ತಿಕ ದಿನಚರಿ ಉಲ್ಲೇಖ

೩೦

ದೊರೆತ ಸ್ಥಳ : ಬಡಾ ಮಕಾನ ಸ್ಮಶಾನದಲ್ಲಿ, ಗೋರಿ ನಂ ೩

ರಾಜ :

ರಾಜ್ಯ ;

ದಿನಾಂಕ : ಹಿಜರಿ ಶಕ ೧೩೨೦ [ಕ್ರಿ. ಶ. ೧೯೦೨ರ ಏಪ್ರಿಲ್ ೧೦ ರಿಂದ ೧೯೦೩ ಮಾಚ್ ೨೯]

ಭಾಷೆ : ಅರೇಬಿಕ್ ಮತ್ತು ಉರ್ದು

ವಿಷಯ : ಮೇಲೆ ಹೇಳಿದ ವರುಷದಲ್ಲಿ ಶೇರ್ ಖಾನ ಸೌದಾಗರ [ವ್ಯಾಪಾರಿ] ಮರಣದ ಉಲ್ಲೇಖ, ಕಲ್ಲು ಕಟೆದ ಶಮ್ಸುದ್ದೀನನ ಹೆಸರೂ ಇದೆ.

ಸಂದರ್ಭ/ಉಲ್ಲೇಖ:

೧. ಎಆರ್ ಐಇ ೧೯೪೪-೯೫ ಸಿ.೫೯ ೨. ವೈಯಕ್ತಿಕ ದಿನಚರಿ

೩೧

ದೊರೆತ ಸ್ಥಳ : ಪಟ್ಟಣದ ಇದಗಾದ ಮುಖ್ಯ ದ್ವಾರದಲ್ಲಿರುವ ಶಾಸನ.

ರಾಜ :

ರಾಜ್ಯ ;

ದಿನಾಂಕ : ಹಿಜರಿ ಶಕ ೧೩೨೮ [ಕ್ರಿ. ಶ. ೧೯೧೦]

ಭಾಷೆ : ಪರ್ಶಿಯನ್

ವಿಷಯ : ಮೇಲೆ ಹೇಳಿದ ವರುಷದಲ್ಲಿ ಹಾಜಿ ಹೈದರಖಾಸನ ಮಗ ಉದ್ಯಮಿ [ತಾಜ್ಜಿರ] ಗುಲಾಮ್ ರಸೂಲ ಖಾನನಿಂದ ಹಿಜರಿ ಶಕ ೧೩೨೮ (ಕ್ರಿ.ಶ.೧೯೧೦) ಇದಗಾದ ಜೀರ್ಣೋದ್ಧಾರ. ಮುಂದುವರಿದು ಬ್ರಿಟಿಶ್ ರೆಸಿಡೆಂಟ ಆನರೆಬಲ್ ಮಿ. ಎಸ್. ಎಮ್. ಫ್ರೇಸರನಿಂದ ಶಂಕು ಸ್ಥಾಪನೆ ಎಂದು ಉಲ್ಲೇಖ. ಬರೆದವನು, ಖಾನ ಬಹಾದ್ದೂರ ಮುಹಮ್ಮದ ಅಬ್ದುರ್ ರಹಮಾನ, ಕೈಸರ–ಇ–ಹಿಂದ ಮತ್ತು ನ್ಯಾಯಾಧೀಶ

ಸಂದರ್ಭ/ಉಲ್ಲೇಖ :

೧. ಕರ್ನಾಟಕ ಪಿಎಯುಐದಲ್ಲಿ ಪತ್ಯ ಪ್ರಕಟ. ಪುಟ– ೮.

೨. ಆರ್ ಎಮ್ ಎಫ್ ಎ ಯುಕೆ, ಪುಟ– ೧೦೬

೩೨

ದೊರೆತ ಸ್ಥಳ : ಪಟ್ಟಣದ ಇದಗಾದ ಕಲ್ಲಿನ ಮೇಲೆ.

ರಾಜ :

ರಾಜ್ಯ ;

ದಿನಾಂಕ : ಹಿಜರಿ ಶಕ ೧೩೨೮ [ಕ್ರಿ. ಶ. ೧೯೧೦]

ಭಾಷೆ : ಪರ್ಶಿಯನ್

ವಿಷಯ : ಮೇಲೆ ಹೇಳಿದ ವರುಷದಲ್ಲಿ ಲಬ್ಬಾಬಿನ್ ಸಮಾಜದ ಧರ್ಮದರ್ಶಿಗಳಾದ ಹಾಜಿ ಕಾದರನ ಮಗ ಹಾಜಿ ಬಾದಶಾಹ, ಹಾಜಿ ಅಬ್ದುರ್ ರಹಮಾನನ ಮಗ ಮುಹಮ್ಮದ ಯುಸುಫ, ಹಾಜಿ ಬದ್ರುದ್ದೀನನ ಮಗ ಲಬ್ಬಾಜಿ ಅಹಮದ ಹುಸೇನ ಈ ಶಾಸನವನ್ನು ಬರೆಸಿದರು. ಹಿಜರಿ ಶಕ ೧೩೨೮ (ಕ್ರಿ.ಶ.೧೯೧೦)

ಸಂದರ್ಭ/ಉಲ್ಲೇಖ:

೧. ಕರ್ನಾಟಕ ಪಿಎಯುಐದಲ್ಲಿ ಪತ್ಯ ಪ್ರಕಟ. ಪುಟ– ೯.

೨. ಆರ್ ಎಮ್ ಎಫ್ ಎ ಯುಕೆ, ಪುಟ– ೧೦೮

೩೩

ದೊರೆತ ಸ್ಥಳ : ತವಕ್ಕಲ ಮಸ್ತಾನ ಸಮಾಧಿ

ರಾಜ :

ರಾಜ್ಯ ;

ದಿನಾಂಕ : ಹಿಜರಿ ಶಕ ೧೩೫೮ [ಕ್ರಿ. ಶ. ೧೯೩೯–೪೦]

ಭಾಷೆ : ಪರ್ಶಿಯನ್

ವಿಷಯ : ತವಕ್ಕಲ ಮಸ್ತಾನರ ಸ್ತುತಿಪರ ಪದ್ಯಗಳು ಮತ್ತು ಅವರು ವಿಶ್ರಾಂತಿ ಪಡೆದ ಸ್ಥಳದ ಉಲ್ಲೇಖ. ಅವರ ಆಧ್ಯಾತ್ಮಿಕ ಗುರುಗಳು ಬಾಬಾ ಸಯ್ಯದ ಫಕ್ರುದ್ದೀನ ಆಗಿದ್ದರು. ಮೇಲೆ ಹೇಳಿದ ವರುಷದಲ್ಲಿ ಕೆಲಸ ಮುಗಿಯಿತು. ಪತ್ಯವನ್ನು ಬರೆದವನು 'ಕೈಫ'.

ಸಂದರ್ಭ/ಉಲ್ಲೇಖ :

೧. ಆರ್ ಎಮ್ ಎಫ್ ಎ ಯುಕೆ, ಪುಟ– ೯೬

ಸ್ಥಳ–ದೊಡ್ಡಬಳ್ಳಾಪುರ

೩೪

ದೊರೆತ ಸ್ಥಳ : ಗ್ರಾಮೀಣ ಪೋಲೀಸ್ ಸ್ಟೇಶನ್‌ದಲ್ಲಿಯ ಕಲ್ಲಿನ ಶಾಸನ.

ರಾಜ : ಔರಂಗಜೇಬ

ರಾಜ್ಯ : ಮುಘಲ

ದಿನಾಂಕ : ೧. ಔರಂಗಜೇಬನ ರಾಜ್ಯಾರೋಹಣ ವರುಷ ೩೨, [ಕ್ರಿ. ಶ. ೧೬೮೮–೮೯]

೨. ಔರಂಗಜೇಬನ ರಾಜ್ಯಾರೋಹಣ ವರುಷ ೩೪, ಹಿಜರಿ ೧೧೦೧–೦೨, [ಕ್ರಿ. ಶ. ೧೬೯೦–೯೧]

ಭಾಷೆ : ಪರ್ಶಿಯನ್/ಕನ್ನಡ

ವಿಷಯ : ಮೇಲೆ ಹೇಳಿದ ವರುಷಗಳು ಔರಂಗಜೇಬನ ರಾಜ್ಯಾರೋಹಣದ ವರುಷಗಳನ್ನು ಹೇಳುತ್ತವೆ. ಮತ್ತು ಬಳ್ಳಾಪುರ ಕೋಟೆಯಲ್ಲಿ ಶಿವಾಜಿಯ ಮಗ ಸಂಭಾಜಿಯ ಅಧೀನದಲ್ಲಿ ಅಧಿಕ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಲಾಗಿದೆ. ೩೨ನೆಯ ವರುಷ (ಕ್ರಿ.ಶ.೧೬೮೮–೮೯) ಮರಾಠಾ ಮುಖ್ಯಸ್ಥ ಕಾಸಿಮಖಾನ ಫೌಜದಾರ ಜಿಲ್ಲಾ [ಕರ್ನಾಟಕ], ದಾರುಲ್ ಜಫರ್ ಬಿಜಾಪುರ ಪ್ರಾಂತನಿಂದ ಸ್ವಾಧೀನ ಪಡಿಸಿಕೊಳ್ಳಲಾಯಿತು. ಮತ್ತೂ ಅದೇ ವರುಷ ಅಜೋಧನದ, ಶಾಹಜಹಾನಪುರ [ದೆಪಲಿ] ಪ್ರಾಂತದ ಬದಾಯುನದಲ್ಲಿರುವ ಶೇಖ ಫರೀದುದ್ದೀನ ಚಿಸ್ತಿ ವಂಶಸ್ಥ, ಶೇಖ–ಉಲ್–ಮಶಾಯಿಖ ಮುಹಮ್ಮದ ಅಲ್–ಫರೂಕಿಯ ಸ್ವಾಧೀನಕ್ಕೆ ಕೊಡಲಾಯಿತು. ಈತನು ಈ ಕಲ್ಲನ್ನು ಹತ್ತಿರ ಎರಡು ಕ್ರೋಹ ದೂರದಲ್ಲಿದ್ದ ಭೋಸಲಾ ಕೋಟೆಯ ಹಾಳುಬಿದ್ದ ಗುಡಿಯಿಂದ ತಂದನು. ಕನ್ನಡ ಶಾಸನವನ್ನು ಮದನಮೋಹನಸಿಂಗ ಬರೆದಿದ್ದರೆ, ಪರ್ಶಿಯನ್ ಶಾಸನವನ್ನು ಶೇಖ ಮುಹಮ್ಮದ ಹಾಫಿಜನು ಮೇಲೆ ಹೇಳಿದ ಶೇಖನ ಆದೇಶಾನುಸಾರ ಬರೆದನು.

ಸಂದರ್ಭ/ಉಲ್ಲೇಖ :

೧. ಕರ್ನಾಟಕ ಪಿಎಯುಐದಲ್ಲಿ ಪತ್ರ ಪ್ರಕಟ. ಪುಟ– ೧೧.

೨. ಆರ್ ಎಮ್ ಎಫ್ ಎ ಯುಕೆ, ಪುಟ– ೯೬

ಸ್ಥಳ – ರಾಮನಗರ

೩೫

ದೊರೆತ ಸ್ಥಳ : ಪಟ್ಟಣದಲ್ಲಿರುವ ಶಾಸನ ಕಲ್ಲು.

ರಾಜ : ಕೃಷ್ಣರಾಜ ಒಡೆಯರ

ರಾಜ್ಯ : ಮೈಸೂರು ಮಹಾರಾಜರು

ದಿನಾಂಕ : ಶಾಲಿವಾಹನ ಶಕೆ ೧೭೨೧ [ಕ್ರಿ. ಶ. ೧೭೯೯]

ಭಾಷೆ : ಪರ್ಶಿಯನ್

ವಿಷಯ : ಮೇಲೆ ಹೇಳಿದ ವರುಷದಲ್ಲಿ ಮಹಾರಾಜ ಒಡೆಯರ ಅವರು ತಮ್ಮ ಆಪ್ತ ಸ್ನೇಹಿತ ಕರ್ನಲ್ ಕ್ಲೋಸ ಸಾಹೇಬನ ನೆನಪಿನಲ್ಲಿ ಕ್ಲೋಸಪೇಟೆ ನಗರವನ್ನು ಸ್ಥಾಪಿಸಿದರು. [ಈಗ ಕ್ಲೋಸಪೇಟೆಯು ರಾಮನಗರವೆಂದು ಮರುನಾಮಕರಣಗೊಂಡಿದೆ]

ಸಂದರ್ಭ/ಉಲ್ಲೇಖ :

೧. ವೈಯಕ್ತಿಕ ದಿನಚರಿಯ ಪುಟ– ಗಳಿಂದ

ಬೆಳಗಾವಿ ಜಿಲ್ಲೆ

ಸ್ಥಳ – ಅಥಣಿ

೩೬

ದೊರೆತ ಸ್ಥಳ : ಗಚ್ಚಿನ ಮಠದ ಮೊಹಲ್ಲಾದಲ್ಲಿರುವ ದಿವಾನ ಬಾವಡಿ, ಬಲಗಡೆಯ ಮೆಟ್ಟಿಲುಗಳ ಗೋಡೆಯಮೇಲೆ.

ರಾಜ : ಮುಹಮ್ಮದ ಆದಿಲಶಾಹ

ರಾಜ್ಯ : ಆದಿಲಶಾಹಿ

ದಿನಾಂಕ : ಹಿಜರಿ ಶಕ ೧೦೫೯ [ಕ್ರಿ. ಶ. ೧೬೪೯–೫೦, ಜನವರಿ ೫ ರಿಂದ ಡಿಸೆಂಬರ್ ೨೪]

ಭಾಷೆ : ಪರ್ಶಿಯನ್

ವಿಷಯ : ತ್ರುಟಿತ, ಮುಹಮ್ಮದ ಆದಿಲಶಾಪನ ಕಾಲದಲ್ಲಿ ಘುಂಕಾರನೆಂಬ ಪುಸು ಸರಹವಾಲದಾರನು [?] ಕಟ್ಟಿದ ಬಾವಿ. ಆಗ ಎರಡನೆಯ ಇಖಲಾಸಖಾನನು ಮುಕಾಸದಾರನಾಗಿದ್ದನು.

ಸಂದರ್ಭ/ಉಲ್ಲೇಖ:

೧. ಎಆರ್ ಐಇ ೧೯೮೭–೮೮ ಸಿ–೪೩

೩೭

ಸ್ಥಳ – ಬೆಳಗಾವಿ

ದೊರೆತ ಸ್ಥಳ : ಕೋಟೆಯಲ್ಲಿಯ ಬದ್ರುದ್ದೀನ ಶಾಹನ ಸಮಾಧಿ. ಕಲ್ಲಿನ ಶವಸಂಪುಟದ ಮಗ್ಗಲಿಗೆ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೭೫೨ [ಕ್ರಿ. ಶ. ೧೩೫೧–೫೨]

ಭಾಷೆ : ಅರೇಬಿಕ್

ವಿಷಯ : ಮರಣವನ್ನಪ್ಪಿದವನ ಸಂಪ್ರದಾಯದ ಕುರಿತು ಧಾರ್ಮಿಕ ಪದ್ಯ.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೬೨–೬೩ ಡಿ–೧೫೧

೩೮

ದೊರೆತ ಸ್ಥಳ : ಕೋಟೆಯಲ್ಲಿರುವ ಸಫಾ ಮಸೀದಿಯ ಮುಖ್ಯ ಪ್ರವೇಶದಲ್ಲಿ ಬಲಗಡೆಗೆ.

ರಾಜ : ಇಸ್ಮೈಲ ಆದಿಲಖಾನ

ರಾಜ್ಯ : ಆದಿಲಶಾಹಿ

ದಿನಾಂಕ : ಹಿಜರಿ ಶಕ ೯೨೪ [ಕ್ರಿ. ಶ. ೧೫೧೮]

ಭಾಷೆ : ಪರ್ಶಿಯನ್

ವಿಷಯ : ಅಸದಖಾನನಿಂದ ಮಸೀದಿಯ ಶಂಕು ಸ್ಥಾಪನೆ. ಬರೆದವನು ಕಾಜಿ ನಿಜಾಮ್ ಅದ–ದವ್ವಾನಿ

ಸಂದರ್ಭ/ಉಲ್ಲೇಖ:

೧. ಎಆರ್ ಐಇ ೧೯೬೨–೬೩ ಡಿ–೧೫೨

೨. ಇಐಎಪಿಎಸ್ ೧೯೭೬ ದಲ್ಲಿ ಪದ್ಯ ಪ್ರಕಟ

೩. ಕರ್ನಾಟಕ ಪಿಎಯುಐ ದಲ್ಲಿ ಪದ್ಯ ಪ್ರಕಟ ಪುಟ– ೧೨

೩೯

ದೊರೆತ ಸ್ಥಳ : ಕೋಟೆಯಲ್ಲಿರುವ ಸಫಾ ಮಸೀದಿಯ ಪ್ರವೇಶದ ಮೇಲ್ಗಡೆಗೆ.

ರಾಜ : ಇಸ್ಮೈಲ ಆದಿಲಖಾನ

ರಾಜ್ಯ : ಆದಿಲಶಾಹಿ

ದಿನಾಂಕ : ಹಿಜರಿ ಶಕ ೯೨೪ ರಜಬ ೨೧ [ಕ್ರಿ. ಶ. ೧೫೧೯ ಜುಲೈ ೧೯]

ಭಾಷೆ : ಪರ್ಶಿಯನ್

ವಿಷಯ : ಅಸದಖಾನನಿಗೆ ಮಸೀದಿಯ ಕಟ್ಟುವದನ್ನು ವಹಿಸಿದ್ದು. ಕವಿತಾ ರಚನೆ, ನೂರಿ, ಬರೆದವನು ಹೈದರ, ಮುಹಮ್ಮದ ಅದ-ದವ್ವಾನಿಯ ಮಗ ಅಸದನ ಮಗ, ಅಹಮ್ಮದ.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೬೨-೬೩ ಡಿ-೧೫೩

೪೦

ದೊರೆತ ಸ್ಥಳ : ಕೋಟೆಯಲ್ಲಿರುವ ಸಫಾ ಮಸೀದಿಯ ೬ನೆಯ ಕಂಬದ ಪಶ್ಚಿಮದ ಮೊದಲನೆಯ ಸಾಲು.

ರಾಜ :

ರಾಜ್ಯ :

ದಿನಾಂಕ : [ಕ್ರಿ. ಶ. ೧೫೧೯]

ಭಾಷೆ : ಅರೇಬಿಕ್ ಮತ್ತು ಪರ್ಶಿಯನ್

ವಿಷಯ : ಮಸ್ಜಿದ-ಇ-ಸಫಾದ ಹೊಗಳುವಿಕೆಯಲ್ಲಿ ಕುರಾನಿನ ಪದ್ಯ ಮತ್ತು ಕೆಲವು ಪದ್ಯಗಳು. ಬರೆದವನು ಕಾಶೀಮ-ಅಲ್-ಹುಸೇನಿಯ ಮಗ ಅಬು ತಾಲಿಬ

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೬೫-೬೬ ಡಿ-೨೩೯

೪೧

ದೊರೆತ ಸ್ಥಳ : ಮಾರುಕಟ್ಟೆಗೆ ಹತ್ತಿರದ ವಾಸದ ಮನೆಗಳಲ್ಲಿಯ ಬಾಬೂರಾವ ಮನೆಯ ಕಲ್ಲಿನ ಮೇಲೆ. ಮಸೀದಿಯ ಮುಖ್ಯ ಪ್ರವೇಶದಲ್ಲಿ ಬಲಗಡೆಗೆ.

ರಾಜ :

ರಾಜ್ಯ :

ದಿನಾಂಕ : [ಕ್ರಿ. ಶ. ೧೫೧೯]

ಭಾಷೆ : ಪರ್ಶಿಯನ್

ವಿಷಯ : ಅತ್ಯಂತ ಪವಿತ್ರ ಖಾನ ಮನೆತನದ ಧೀರ ಅಸದಖಾನನು ತಾನೇ ಕಟ್ಟಿದ ಸಫಾ ಮಸೀದಿಗೆ ದತ್ತಿ ನೀಡಿದ ಕೃಷಿಯೋಗ್ಯ ಭೂಮಿಯ ಗಡಿಯನ್ನು ಈ ಕಲ್ಲು ತೋರಿಸುತ್ತದೆ. ಉಲ್ಲಂಘಿಸಿದವರಿಗೆ ಶಾಪದೊಂದಿಗೆ ಮುಕ್ತಾಯವಾಗುತ್ತದೆ.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೬೫-೬೬ ಡಿ-೨೩೩

೪೨

ದೊರೆತ ಸ್ಥಳ : ರೇಲ್ವೇ ಕ್ರಾಸ್ಸಿನ ಹತ್ತಿರದ ಟಿಂಬರ ಯಾರ್ಡಿನ ಕಲ್ಲಿನಮೇಲೆ

ರಾಜ :

ರಾಜ್ಯ :

ದಿನಾಂಕ : [ಕ್ರಿ. ಶ. ೧೫೧೯]

ಭಾಷೆ : ಪರ್ಶಿಯನ್

ವಿಷಯ : ಅತ್ಯಂತ ಪವಿತ್ರ ಖಾನ ಮನೆತನದ ಧೀರ ಅಸದಖಾನನು ತಾನೇ ಕಟ್ಟಿದ ಸಫಾ ಮಸೀದಿಗೆ ದತ್ತಿ ನೀಡಿದ ಕೃಷಿಯೋಗ್ಯ ಭೂಮಿಯ ಗಡಿಯನ್ನು ಈ ಕಲ್ಲು ತೋರಿಸುತ್ತದೆ. ಉಲ್ಲಂಘಿಸಿದವರಿಗೆ ಶಾಪದೊಂದಿಗೆ ಮುಕ್ತಾಯವಾಗುತ್ತದೆ.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೬೫-೬೬ ಡಿ-೨೩೪

೪೩

ದೊರೆತ ಸ್ಥಳ : ಕೋಟೆಯ ಹತ್ತಿರದ ಹೊಲದಲ್ಲಿಯ ಕಲ್ಲಿನ ಮೇಲೆ.

ರಾಜ :

ರಾಜ್ಯ :

ದಿನಾಂಕ : [ಕ್ರಿ. ಶ. ೧೫೧೯]

ಭಾಷೆ : ಪರ್ಶಿಯನ್

ವಿಷಯ : ಅತ್ಯಂತ ಪವಿತ್ರ ಖಾನ ಮನೆತನದ ಧೀರ ಅಸದಖಾನನು ತಾನೇ ಕಟ್ಟಿದ ಸಫಾ ಮಸೀದಿಗೆ ದತ್ತಿ ನೀಡಿದ ಕೃಷಿಯೋಗ್ಯ ಭೂಮಿಯು ಗಡಿಯನ್ನು ಈ ಕಲ್ಲು ತೋರಿಸುತ್ತದೆ. ಉಲ್ಲಂಘಿಸಿದವರಿಗೆ ಶಾಪದೊಂದಿಗೆ ಮುಕ್ತಾಯವಾಗುತ್ತದೆ.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೬೫-೬೬ ಡಿ-೨೪೨

೪೪

ದೊರೆತ ಸ್ಥಳ : ಕೋಟೆಯಿಂದ ೩ ಕಿಲೋಮೀಟರು ದೂರದ ಇನ್ನೊಂದು ಹೊಲದ ಕಲ್ಲಿನಮೇಲೆ

ರಾಜ :

ರಾಜ್ಯ :

ದಿನಾಂಕ : [ಕ್ರಿ. ಶ. ೧೫೧೯]

ಭಾಷೆ : ಪರ್ಶಿಯನ್

ವಿಷಯ : ಅತ್ಯಂತ ಪವಿತ್ರ ಖಾನ ಮನೆತನದ ಧೀರ ಅಸದಖಾನನು ತಾನೇ ಕಟ್ಟಿದ ಸಫಾ ಮಸೀದಿಗೆ ದತ್ತಿ ನೀಡಿದ ಕೃಷಿಯೋಗ್ಯ ಭೂಮಿಯು ಗಡಿಯನ್ನು ಈ ಕಲ್ಲು ತೋರಿಸುತ್ತದೆ. ಉಲ್ಲಂಘಿಸಿದವರಿಗೆ ಶಾಪದೊಂದಿಗೆ ಮುಕ್ತಾಯವಾಗುತ್ತದೆ.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೬೫-೬೬ ಡಿ-೨೪೩

೪೫

ದೊರೆತ ಸ್ಥಳ : ನಗರದ ಜಾಮೀ ಮಸೀದಿಯ ಸಭಾಗೃಹದ ಪ್ರವೇಶದ ಮೇಲ್ಭಾಗದಲ್ಲಿ

ರಾಜ : ಎರಡನೆಯ ಇಬ್ರಾಹಿಮ

ರಾಜ್ಯ : ಆದಿಲಶಾಹ

ದಿನಾಂಕ : ಹಿಜರಿ ಶಕ ೯೯೪ [ಕ್ರಿ. ಶ. ೧೫೮೫-೮೬]

ಭಾಷೆ : ಪರ್ಶಿಯನ್

ವಿಷಯ : ಅಧಿಕಾರಿ ಶೇರಖಾನನಿಂದ ಮಸೀದಿ ಕಟ್ಟಿದ ಉಲ್ಲೇಖ

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೬೨-೬೩ ಡಿ-೧೫೬

೪೬

ದೊರೆತ ಸ್ಥಳ : ನಗರದ ಜಾಮೀ ಮಸೀದಿಯ ಮಧ್ಯ ಮಿಹರಾಬದಲ್ಲಿ

ರಾಜ :

ರಾಜ್ಯ :

ದಿನಾಂಕ : [ಕ್ರಿ. ಶ. ೧೫೮೫-೮೬]

ಭಾಷೆ : ಪರ್ಶಿಯನ್

ವಿಷಯ : ಮಸೀದಿ ಕಟ್ಟಿದ ಉಲ್ಲೇಖ

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೬೨-೬೩ ಡಿ-೧೫೭

೪೭

ದೊರೆತ ಸ್ಥಳ : ನಗರದ ಜಾಮೀ ಮಸೀದಿಯ ಮಧ್ಯ ಮಿಹರಾಬದ ಮೇಲ್ಭಾಗದಲ್ಲಿ

ರಾಜ :

ರಾಜ್ಯ :

ದಿನಾಂಕ : [ಕ್ರಿ. ಶ. ೧೫೮೫-೮೬]

ಭಾಷೆ : ಅರೇಬಿಕ್

ವಿಷಯ : ಕುರಾನದ ಪಥ್ಯ, ಶಿಲ್ಪಿಯ ಹೆಸರು, ಮುಸಾ-ಅಲ್- ಹುಸೇನೀ ಮಗ ಅಬು ತಾಲಿಬ್ 'ರೌಶನ್ ಕಲಮ್'

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೬೨-೬೩ ಡಿ-೧೫೮

೪೮

ದೊರೆತ ಸ್ಥಳ : ಕೋಟೆಯಲ್ಲಿರುವ ಸಫಾ ಮಸೀದಿಯ ೬ನೆಯ ಕಂಬದ ಪೂರ್ವದ ಮೊದಲನೆಯ ಸಾಲು.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೯೯೭ [?] [ಕ್ರಿ. ಶ. ೧೫೮೮-೮೯]

ಭಾಷೆ : ಅರೇಬಿಕ್

ವಿಷಯ : ಕುರಾನಿನ ಪಥ್ಯ ಮತ್ತು ಕೆಲವು ಪದ್ಯಗಳು. ಬರೆದವನು ಕಾಶೀಮನ ಮಗ ಅಬು ತಾಲಿಬ್

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೬೫-೬೬ ಡಿ-೨೪೧

೪೯

ದೊರೆತಸ್ಥಳ : ಕೋಟೆಯಲ್ಲಿರುವ ಸಫಾ ಮಸೀದಿಯ ಮಧ್ಯ ಮಿಹರಾಬದ ಮೇಲ್ಭಾಗದಲ್ಲಿ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೯೯೮ [?] [ಕ್ರಿ. ಶ. ೧೫೮೯–೯೦]

ಭಾಷೆ : ಅರೇಬಿಕ್

ವಿಷಯ : ಕುರಾನಿನ ಪಠ್ಯ ಮತ್ತು ಕೆಲವು ಪದ್ಯಗಳು. ಬರೆದವನು ತಾಲಿಬ್ ಹುಸೇನಿಯ 'ಜರೀನ ಕಲಮ್'

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೬೪–೬೫ ಡಿ–೨೩೭

೫೦

ದೊರೆತ ಸ್ಥಳ : ಕೋಟೆಯಲ್ಲಿಯ ಕಲ್ಲು ಈಗ ಪುರಾತತ್ವ ವಸ್ತುಸಂಗ್ರಹಾಲಯದಲ್ಲಿದೆ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೦೪೩ [ಕ್ರಿ. ಶ. ೧೬೩೩–೩೪]

ಭಾಷೆ : ಪರ್ಶಿಯನ್

ವಿಷಯ : ಬಿದ್ದು ಹಾಳಾದ ಕೋಟೆಯನ್ನು ಮುಖ್ಯಸ್ಥನಾದ ಅಬ್ದುಲ್ ಹುಸೇನನ ಕಾಲದಲ್ಲಿ ಸಂಪೂರ್ಣವಾಗಿ ಜೀರ್ಣೋದ್ಧಾರ ಮಾಡಲಾಯಿತು. ಬರೆದವನು ಅಬ್ದುಲ್ ಅಜೀಜ.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೫೨–೫೩ ಸಿ–೪೨

೨. ಇಐಎಪಿಎಸ್ ೧೯೫೫ ಮತ್ತು ೧೯೫೬ ದಲ್ಲಿ ಪಠ್ಯ ಪ್ರಕಟ ಪುಟ–೭೨ ಪಿ.ಎಲ್.XVIII.ಬ

೩೧

ದೊರೆತ ಸ್ಥಳ : ಕೋಟೆಯಲ್ಲಿರುವ ಲೋಕೋಪಯೋಗಿ ಕಚೇರಿಯ ಹತ್ತಿರ ಬಿದ್ದ ಕಲ್ಲಿನ ಮೇಲೆ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೦೪೩ [ಕ್ರಿ. ಶ. ೧೬೩೩-೩೪]

ಭಾಷೆ : ಪರ್ಶಿಯನ್

ವಿಷಯ : ಸಂದಲ್ ಎಂಬವನಿಂದ ಕಟ್ಟಡ ನಿರ್ಮಾಣ, ಬರೆದವನು ಅಬ್ದುಲ್ ಅಜೀಜ.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೬೨-೬೩ ಡಿ-೧೫೫

೩೨

ದೊರೆತ ಸ್ಥಳ : ಕೋಟೆಯಲ್ಲಿರುವ ಕಲ್ಲು ಈಗ ಮಹಾರಾಷ್ಟ್ರದ ಮುಂಬಯಿಯ ಪ್ರಿನ್ಸ ಆಫ್ ವೇಲ್ಸ ವಸ್ತು ಸಂಗ್ರಹಾಲಯದಲ್ಲಿ .

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೦೫೭ [ಕ್ರಿ. ಶ. ೧೬೪೭-೪೮]

ಭಾಷೆ : ಪರ್ಶಿಯನ್

ವಿಷಯ : ಖಾನ ಮುಹಮ್ಮದನ ಕಾಲದಲ್ಲಿ ಝೂಬಿತಖಾನನ ಮಗ ಮುಹಮ್ಮದನಿಂದ ಕೋಟೆಯ ಗೋಡೆಯನ್ನು ಕಟ್ಟಲಾಯಿತು.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೫೬-೫೭ ಡಿ-೩೧

೫೩

ದೊರೆತ ಸ್ಥಳ : ಕೋಟೆಯಲ್ಲಿದ್ದ ಕಲ್ಲು ಈಗ ಬಿಜಾಪುರ ಪುರಾತತ್ವ ವಸ್ತು ಸಂಗ್ರಹಾಲಯದಲ್ಲಿದೆ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೦೫೮ [ಕ್ರಿ. ಶ. ೧೬೪೮-೪೯]

ಭಾಷೆ : ಪರ್ಶಿಯನ್

ವಿಷಯ : ಯಾಕೂಬ ಅಲಿ ಖಾನನಿಂದ ಕೋಟೆ ಗೋಡೆಯ ಶಂಕುಸ್ಥಾಪನೆ. ಬರೆದವನು ದಲಬೀರ.

ಸಂದರ್ಭ/ಉಲ್ಲೇಖ:

೧. ಇಐಎಪಿಎಸ್ ೧೯೫೫-೫೬ ದಲ್ಲಿ ಪತ್ರ ಪ್ರಕಟ ಪುಟ- ಪಿ.ಎಲ್. XVIII.C ೭೧.

೫೪

ದೊರೆತ ಸ್ಥಳ : ಅಮ್ಮಾವಾಲಿ ಸಮಾಧಿಯ ಪೂರ್ವದ ಕಲ್ಲು

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೨೯೬, ಮೊಹರಮ್ ೨೫ [ಕ್ರಿ.ಶ.೧೮೭೯ ಫೆಬ್ರವರಿ ೧೯]

ಭಾಷೆ : ಉರ್ದು

ವಿಷಯ : ಮುಹಮ್ಮದ ಘೌರಿ ಸಾಹಿಬ ಸೌದಾಗರ ಮರಣ ಉಲ್ಲೇಖ.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯[illegible] ಸಿ-೪೨.

೫೫

ದೊರೆತ ಸ್ಥಳ : ಅಮ್ಮಾವಾಲಿ ಸಮಾಧಿಯ ಹತ್ತಿರದ ಕಲ್ಲು

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೨೯೬, ರಜಬ, ೨೨ [ಕ್ರಿ. ಶ. ೧೮೭೯ ಜುಲೈ ೧೩]

ಭಾಷೆ : ಪರ್ಶಿಯನ್

ವಿಷಯ : ಮುಹಮ್ಮದ ಮಿಸ್ಕಿನ ಸಾಹೇಬ ಸೌದಾಗರ ಮಗ ಮುಹಮ್ಮದ ಮಾಸುಮ ಸಾಹಿಬ ಸೌದಾಗರ ಮರಣ ಉಲ್ಲೇಖ.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೮೨-೮೩ ಸಿ-೪೫

೫೬

ದೊರೆತ ಸ್ಥಳ : ಅಮ್ಮಾವಾಲಿ ಸಮಾಧಿಯ ಪಶ್ಚಿಮದ ಪ್ರಧಾನ ಕಲ್ಲು

ರಾಜ :

ರಾಜ್ಯ :

ದಿನಾಂಕ : ಫಸಲಿ ೧೨೯೨ (ಹಿಜರಿ ಶಕ ೧೨೯೯) ರಜಬ, ೧೮ [ಕ್ರಿ. ಶ. ೧೮೮೨ ಜೂನ್ ೫, ಶುಕ್ರವಾರ ಮಧ್ಯರಾತ್ರಿ]

ಭಾಷೆ : ಉರ್ದು

ವಿಷಯ : ಖೂರುದ್ದೀನ ಸಾಹೇಬ ಮರಣ ಉಲ್ಲೇಖ.

ಸಂದರ್ಭ/ಉಲ್ಲೇಖ:

೧. ಎಆರ್ ಐಇ ೧೯೮೨-೮೩ ಸಿ-೪೬

೫೭

ದೊರೆತ ಸ್ಥಳ : ಅಮ್ಮಾವಾಲಿ ಸಮಾಧಿಯ ಪೂರ್ವದ ಪ್ರಧಾನ ಕಲ್ಲು

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೩೦೮, ರಬಿ, ೧ [ಕ್ರಿ. ಶ. ೧೮೯೦ ಅಕ್ಟೋಬರ್ ೧೫, ಗುರುವಾರ]

ಭಾಷೆ : ಉರ್ದು

ವಿಷಯ : ರಾಜಾಪುರದ ಪಠಾನ ಸಾಹಿಬ ಮುಜಾವರ ಮಗ ಶೇಖ ಮುಹಮ್ಮದ ನಿಯಾಜ ಊರ್ಫ ಹುಸೇನ ಸಾಹಿಬ ಮುಜಾವಾರ ಮರಣ ಉಲ್ಲೇಖ. ಅಲ್ಲದೆ ಮರಣವಾದವನ ಹೆಂಡತಿ ಇಮಾಮ ಬಿ. ಮುಜಾವರಳ ಸಮಾಧಿಯ ಕಟ್ಟಡದ ಉಲ್ಲೇಖವೂ ಇದೆ.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೬೨-೬೩, ಸಿ-೪೪

೫೮

ದೊರೆತ ಸ್ಥಳ : ಇದ್ಗಾದ ಹತ್ತಿರದ ಸ್ಮಶಾನ ಪೂರ್ವದ ಗಡಿಯಲ್ಲಿಯ ಗೋರಿಯ ಪ್ರಧಾನ ಕಲ್ಲು.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೩೧೨, ಶಾಬಾನ ೭ [ಕ್ರಿ. ಶ. ೧೮೯೫ ಫೆಬ್ರವರಿ ೩ ಬುಧವಾರ]

ಭಾಷೆ : ಪರ್ಶಿಯನ್

ವಿಷಯ : ಅಫಗಾನಿಸ್ತಾನದ ದಿವಂಗತ ಸಯ್ಯದ ಮುಹಮ್ಮದನ ಮಗ ಸಯ್ಯದ ಪೀರ ಮುಹಮ್ಮದನು ಬೆಳಗಾವಿಯಲ್ಲಿ ಮೇಲೆ ಹೇಳಿದ ದಿನದಂದು ಮರಣಹೊಂದಿದ ಉಲ್ಲೇಖ.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೬೨-೬೩ ಸಿ-೪೨

ಸ್ಥಳ – ದೊನವಾಡ

೫೯

ದೊರೆತ ಸ್ಥಳ : ಮಾರುತಿ ಗುಡಿಯ ಪಕ್ಕದ ಕಲ್ಲು

ರಾಜ :

ರಾಜ್ಯ :

ದಿನಾಂಕ :

ಭಾಷೆ :

ವಿಷಯ : ಹೇಳುವಂಥ ವಿಷಯವೇನನ್ನೂ ಉಲ್ಲೇಖಿಸಿಲ್ಲ

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೬೧–೬೨ ಡಿ–೨೧೪

ಸ್ಥಳ – ಗೋಕಾಕ

೬೦

ದೊರೆತ ಸ್ಥಳ : ಜಂಗ್ಲೀ ಶಾಹ ಕಾದ್ರಿ ದರ್ಗಾ. ಪೂರ್ವದ ಬಾಗಿಲಿನ ಮೇಲೆ.

ರಾಜ :

ರಾಜ್ಯ :

ದಿನಾಂಕ : [ಕ್ರಿ. ಶ. ೧೮ನೆಯ ಶತಮಾನ]

ಭಾಷೆ : ಅರೇಬಿಕ್ ಮತ್ತು ಪರ್ಶಿಯನ್

ವಿಷಯ : ಸಂತ ಶಾಹ ಅಬ್ದುಲ ಲತೀಫ, ಖಾದಿಮರ ಪ್ರಯತ್ನದಿಂದ ಶಾಹ ಹುಸೇನ ಜಂಗ್ಲೀ ಗೋರಿಯ ಕಟ್ಟಡ. ಅಕ್ಷರಗಳು ೧೮ನೆಯ ಶತಮಾನದ್ದೆಂದು ಕಾಣುತ್ತವೆ.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೮೭–೮೮ ಸಿ–೪೫

೬೧

ದೊರೆತ ಸ್ಥಳ : ಜಂಗ್ಲೀ ಶಾಹ ಕಾದ್ರಿ ದರ್ಗಾ. ದಕ್ಷಿಣದ ಬಾಗಿಲಿನ ಮೇಲೆ.

ರಾಜ :

ರಾಜ್ಯ :

ದಿನಾಂಕ : [ಕ್ರಿ. ಶ. ೧೮ನೆಯ ಶತಮಾನ]

ಭಾಷೆ : ಪರ್ಶಿಯನ್

ವಿಷಯ : ಸಂತ ಶಾಹ ಅಬ್ದುಲ ಲತೀಫರು ಖಾದಿಮ ಅಂದರೆ ಶಾಹ ಹುಸೇನ ಜಂಗ್ಲೀ ಸಂತರ ನಿಷ್ಠಾವಂತ ಸೇವಕ ಎಂದು ಉಲ್ಲೇಖ.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೮೭-೮೮ ಸಿ-೪೬

೬೨

ದೊರೆತ ಸ್ಥಳ : ಜಂಗ್ಲೀ ಶಾಹ ಕಾದ್ರಿ ದರ್ಗಾ. ಪಶ್ಚಿಮದ ಬಾಗಿಲಿನ ಮೇಲೆ.

ರಾಜ :

ರಾಜ್ಯ :

ದಿನಾಂಕ : [ಕ್ರಿ. ಶ. ೧೮ನೆಯ ಶತಮಾನ]

ಭಾಷೆ : ಅರೇಬಿಕ್

ವಿಷಯ : ಕುರಾನದ ಅಧ್ಯಾಯ ೨ರ ಪದ್ಯ ೨೫೫ ಧಾರ್ಮಿಕ ಪಠ್ಯ .

ಸಂದರ್ಭ/ಉಲ್ಲೇಖ:

೧. ಎಆರ್ ಐಇ ೧೯೮೭-೮೮ ಸಿ-೪೭

ಸ್ಥಳ – ಹಿರೆಕುಂಬಿ

೬೩

ದೊರೆತ ಸ್ಥಳ : ಬೆಟ್ಟದ ಮೇಲಿನ ಮಕದೂಮ ಶಾಹ ಹುಸೇನಿ ದರ್ಗಾದ ಪ್ರವೇಶದ ಬಾಗಿಲಿನ ಮೇಲೆ.

ರಾಜ :

ರಾಜ್ಯ :

ದಿನಾಂಕ : [ಕ್ರಿ. ಶ. ೧೯ನೆಯ ಶತಮಾನ]

ಭಾಷೆ : ಅರೇಬಿಕ್

ವಿಷಯ : ಧಾರ್ಮಿಕ ಪಥ್ಯ. ನಾದ–ಇ–ಅಲಿ ಮೊದಲ ನಾಲ್ಕು ಖಲೀಫರ ಹೆಸರುಗಳು ಜೊತೆಗೆ ಸಂತ ಮಖದೂಮ ಶಾಹ ಹುಸೇನಿ ತಾರಾ ಹೆಸರು.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೮೭–೮೮ ಸಿ–೫೧

೬೪

೨೯

ದೊರೆತ ಸ್ಥಳ : ಬೆಟ್ಟದ ಮೇಲಿನ ಮಕದೂಮ ಶಾಹ ಹುಸೇನಿ ದರ್ಗಾದ ಬಲಬದಿಯ ಮೇಲೆ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೨೪(೦) [ಕ್ರಿ. ಶ. ೧೮೨೪ ಅಗಸ್ಟ್ ೫ರಿಂದ ೧೮೨೫ ಅಗಸ್ಟ್ ೧೫]

ಭಾಷೆ : ಅರೇಬಿಕ್ ಮತ್ತು ಪರ್ಶಿಯನ್

ವಿಷಯ : ಧಾರ್ಮಿಕ ಪಥ್ಯ. ನಾದ–ಇ–ಅಲಿ ಮೊದಲ ನಾಲ್ಕು ಖಲೀಫರ ಹೆಸರುಗಳು ಜೊತೆಗೆ ಸಂತ ಮಖದೂಮ ಶಾಹ ಹುಸೇನಿ ತಾರಾ ಹೆಸರು.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೮೭–೮೮ ಸಿ–೫೨

ಸ್ಥಳ ಹುಕ್ಕೇರಿ

೬೫

ದೊರೆತ ಸ್ಥಳ : ಮುನ್ಸಿಫ ಕೋರ್ಟ ಕಟ್ಟಡ, ಬಿಡಿ ಕಲ್ಲಿನ ಮೇಲೆ.

ರಾಜ : ಅಲಿ ೧

ರಾಜ್ಯ : ಆದಿಲಶಾಹಿ

ದಿನಾಂಕ : ಹಿಜರಿ ಶಕ ೯೬೯ [ಕ್ರಿ. ಶ. ೧೫೬೧-೬೨]

ಭಾಷೆ : ಪರ್ಶಿಯನ್

ವಿಷಯ : ತ್ರುಟಿತ. ಮೇಲೆ ಹೇಳಿದ ವರುಷದಲ್ಲಿ ಒಂದು ಬೃಹತ್ ಕಟ್ಟಡದ ನಿರ್ಮಾಣದ ಉಲ್ಲೇಖ.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೬೩-೬೪ ಡಿ-೨೪೩

೨. ಕರ್ನಾಟಕ ಪಿಎಯುಐದಲ್ಲಿ ಪತ್ರ ಪ್ರಕಟ ಪುಟ- ೧೮, ನಂ ೨೦

೬೬

ದೊರೆತ ಸ್ಥಳ : ಮನಸಾಹಿಬರ ದರ್ಗಾ. ಪಶ್ಚಿಮ ಗೋಡೆಯ ಮೇಲೆ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೯೭೫ [ಕ್ರಿ. ಶ. ೧೫೬೭-೬೮]

ಭಾಷೆ : ಅರೇಬಿಕ್

ವಿಷಯ : ಧಾರ್ಮಿಕ ಪತ್ರ.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೬೩-೬೪ ಡಿ-೨೪೪

೨. ಕರ್ನಾಟಕ ಪಿಎಯುಐದಲ್ಲಿ ಪತ್ರ ಪ್ರಕಟ ಪುಟ-೧೧, ನಂ ೨೧

೬೭

ದೊರೆತ ಸ್ಥಳ : ಸೌದಾಗರ ಮೊಹಲ್ಲಾದಲ್ಲಿಯ ಕಾಲಿ ಮಸೀದಿ ಪ್ರವೇಶದ ಮೇಲೆ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೯೯೨ [ಕ್ರಿ. ಶ. ೧೫೮೪]

ಭಾಷೆ : ಪರ್ಶಿಯನ್

ವಿಷಯ : ಐನುಲ್‌ಮುಲ್ಕನ ಅಧೀನದಲ್ಲಿದ್ದ ಜನಪ್ರಿಯ ಅಧಿಕಾರಿ ಮನ್ಸೂರ ಖಾನನು ಮಂದಿರವನ್ನು ಕೆಡವಿ ಹಿಜರಿ ಶಕ ೯೯೦ರಲ್ಲಿ [೧೫೮೨-೮೩] ಮಸೀದಿಯ ಶಂಕು ಸ್ಥಾಪನೆಯನ್ನು ಮಾಡಿದನು. ಮೇಲೆ ಹೇಳಿದ ವರುಷ ಮಸೀದಿ ಮುಕ್ತಾಯದ ವರುಷವನ್ನು ತೋರಿಸುತ್ತದೆ.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೬೩-೬೪ ಡಿ-೨೪೫

೨. ಕರ್ನಾಟಕ ಪಿಎಯುಐದಲ್ಲಿ ಪತ್ಯ ಪ್ರಕಟ ಪುಟ-೧೯,ನಂ ೨೨

೩. ಎಆರ್‌ಎಸ್‌ಐಇ ೧೯೪೨-೪೩, ಇ-೨

ದೊರೆತ ಸ್ಥಳ : ಪೀರ ಕಾ ಮಾಲಾದಲ್ಲಿಯ ಹಾಳು ಬಿದ್ದ ಬಾವಿಯ ಬಿರುಕು ಕಲ್ಲಿನಮೇಲೆ.

ರಾಜ :

ರಾಜ್ಯ :

ದಿನಾಂಕ : [ಕ್ರಿ. ಶ. ಸಿ. ೧೫೮೪]

ಭಾಷೆ : ಪರ್ಶಿಯನ್

ವಿಷಯ : ಕಸಬಾ ಹುಕ್ಕೇರಿಯ ಸಾಮೂಹಿಕವಾಗಿ ಮಹಾಜನರು ಮತ್ತು ಗ್ರಾಮ ಅಧಿಕಾರಿಗಳು [ಬಲೂತಿಯಾ] ನಡೆಸಿದ ಜಯಸೇಥಿಯ ಕಾರಂಜಾದ ಪರಿಸರದಲ್ಲಿದ್ದ ಒಂದು ಚಾವರ ಭೂಮಿಯನ್ನು ಕಾರಂಜಾದ ಶಂಕುಸ್ಥಾಪನೆಗಾಗಿ ಮತ್ತು ಜನೋಪಯೋಗಿ ಅತಿಥಿಗೃಹಕ್ಕೆ ದತ್ತಿ ಬಿಟ್ಟದ್ದು ಮತ್ತು ಮನ್ಸೂಖಾನನಿಂದ ಕಟ್ಟಿದ್ದರ ಬಗ್ಗೆ ಮಹಜರಿನ ತಪಸೀಲು. ಅದರಲ್ಲಿಯ ನಾಲ್ಕರಲ್ಲಿಯ ಒಂದು ಭಾಗ ಅತಿಥಿ ಗೃಹಕ್ಕೆ ಬಿಟ್ಟದ್ದು ಅಲ್ಲದೆ ಭೂಮಿಯನ್ನು ಹಸನನ ಮಗ ಮಿಸ್ರಾನ ಅಧೀನಕ್ಕೆ ಕೊಟ್ಟ ಉಲ್ಲೇಖ. ಜೊತೆಗೆ ಕೆಲಸಗಾರರ ಹೆಸರು ಮತ್ತು ಕೆಲವು ವ್ಯಕ್ತಿಗಳ ಹೆಸರುಗಳೂ ಮಹಜರಿನಲ್ಲಿವೆ.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೬೩-೬೪ ಡಿ-೨೪೯

೨. ಕರ್ನಾಟಕ ಪಿಎಯುಐದಲ್ಲಿ ಪತ್ರ ಪ್ರಕಟ ಪುಟ- ೧೭-೧೮, ನಂ. ೧೯

೩. ಎಆರ್ಎಸ್ಐಇ ೧೯೪೨-೪೩, ಇ-೪

೪. ಎಐಎಪಿಎಸ್ ೧೯೭೨ ಪುಟ- ೫೯, ಪ್ಲೇಟ- ೬ ಪ್ರಕಟ

ಸ್ಥಳ – ಕಾಗ್ನೋಳಿ

೬೯

ದೊರೆತ ಸ್ಥಳ : ಅಹ್ಲ—ಇ–ಹದೀಸ ಮಸೀದಿಯ ಮುಖ್ಯ ದ್ವಾರದ ಮೇಲೆ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೩೦೫ ರಮಜಾನ್ [ಕ್ರಿ. ಶ. ೧೮೮೬ ಮೇ, ೧೨ರಿಂದ ಜೂನ್ ೧೦]

ಭಾಷೆ : ಅರೇಬಿಕ್ ಮತ್ತು ಉರ್ದು

ವಿಷಯ : ಇಮಾಮನ ಮಗ ಹಾಜಿ ಕಾಸೀಮನು ಮಸೀದಿಯನ್ನು ಕಟ್ಟಿದನು ಮತ್ತು ಅದನ್ನು ಪ್ರಾರ್ಥನೆಗಾಗಿ ದತ್ತು ಬಿಟ್ಟನು. .

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೮೯–೯೦ ಸಿ–೧೧

ಸ್ಥಳ – ಖರೋಶಿ

೭೦

ದೊರೆತ ಸ್ಥಳ : ಶಾಹ ನೂರ ವಾಲಿ ದರ್ಗಾದ ಹತ್ತಿರ ಇದ್ಗಾದ ಪ್ರವಚನ ಪೀಠದ ಮೇಲೆ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೨೭೨ [ಕ್ರಿ. ಶ. ೧೮೫೫ ಅಕ್ಟೋಬರ್ ೧೩ರಿಂದ ನವೆಂಬರ ೧೦]

ಭಾಷೆ : ಅರೇಬಿಕ್ ಮತ್ತು ಪರ್ಶಿಯನ್

ವಿಷಯ : ಕರ್ವಿಶ್‌ದಲ್ಲಿ [ಖರೋಶಿ] ವಾಸಿಸುವ ಮಕದೂಮ್ ಪಟೇಲನ ಮಗ ಮುಹಮ್ಮದನು ಸದರೀ ಇದ್ಗಾವನ್ನು ಕಟ್ಟಿದನು.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೮೭–೮೮ ಸಿ–೪೪

ಸ್ಥಳ – ಕುಡಚಿ

೭೧

ದೊರೆತ ಸ್ಥಳ : ಮಕದೂಮ ಶಾಹ ವಾಲಿ ದರ್ಗಾದ ಮುಖ್ಯ ಪ್ರವೇಶ ದ್ವಾರದ ಮೇಲೆ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೯೨೮ [ಕ್ರಿ. ಶ. ೧೫೨೧–೨೨]

ಭಾಷೆ : ಪರ್ಶಿಯನ್

ವಿಷಯ : ಸಂತರಲ್ಲಿ ಶ್ರೇಷ್ಠರಾದ, ಸಯ್ಯದ ಮಖದೂಮರ ಮಗ ಖಂದ ಮೀರ ಕಮಾಲರ ಮರಣದ ಉಲ್ಲೇಖ.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೬೩–೬೪ ಡಿ–೨೫೦

೭೨

ದೊರೆತ ಸ್ಥಳ : ಮಕದೂಮ ಶಾಹ ವಾಲಿ ದರ್ಗಾದಲ್ಲಿಯ ಇನ್ನೊಂದು ಶಾಸನ.

ರಾಜ :

ರಾಜ್ಯ :

ದಿನಾಂಕ : [೧೬ನೆಯ ಶತಮಾನ]

ಭಾಷೆ : ಅರೇಬಿಕ್

ವಿಷಯ : ಮರಣ ಹೊಂದಿದ ಮಕದೂಮ ಖಂದ ಮೀರರ ಸ್ತುತಿಪರ ಪ್ರಾರ್ಥನೆ.

ಸಂದರ್ಭ/ಉಲ್ಲೇಖ:

೧. ಎಆರ್ ಐಇ ೧೯೬೩–೬೪ ಡಿ–೨೫೧

ಸ್ಥಳ – ರಾಯಬಾಗ

೭೩

ದೊರೆತ ಸ್ಥಳ : ಹಳೆಯ ಜಾಮೀ ಮಸೀದಿ. ಕಟ್ಟಡದ ಮುಂಭಾಗದಲ್ಲಿ

ರಾಜ :

ರಾಜ್ಯ :

ದಿನಾಂಕ : ಶುಹೂರ ಶಕ ೧೧೩೦ [ಹಿಜರಿ ಶಕ ೧೧೪೫], ಜಮಾದಾ I, ೧೯ ಶುಕ್ರವಾರ [ಕ್ರಿ. ಶ. ೧೭೩೯ ಡಿಸೆಂಬರ್ ೨೫]

ಭಾಷೆ : ಪರ್ಶಿಯನ್

ವಿಷಯ : ರಾಯಬಾಗದಲ್ಲಿ ಅಮಿನ ಮುಸ್ತಫಾಖಾನನಿಂದ ಮೇಲೆ ಹೇಳಿದ ವರುಷದಲ್ಲಿ ಮಸೀದಿಯನ್ನು ಕಟ್ಟಲಾಯಿತು.

ಸಂದರ್ಭ/ಉಲ್ಲೇಖ:

೧. ಎಆರ್ ಐಇ ೧೯೬೩–೬೪ ಡಿ–೨೫೭

೭೪

ದೊರೆತ ಸ್ಥಳ : ಸ್ಟೇಶನ್ ರಸ್ತೆಯ ಸೇತುವೆಯ ಹತ್ತಿರದ ಹೊಲದ ಮೂಲೆಯ ಕಲ್ಲಿನ ಮೇಲೆ.

ರಾಜ :

ರಾಜ್ಯ :

ದಿನಾಂಕ : ಸಿ. [ಕ್ರಿ. ಶ. ೧೭೩೯]

ಭಾಷೆ : ಪರ್ಶಿಯನ್

ವಿಷಯ : ಮೂರು ವರುಷದ ಒಂದು ಕೌಲನಾಮಾ [ಒಪ್ಪಂದಪತ್ರ]. ಮೊದಲನೆಯದಾಗಿ ಮುಸ್ತಫಾಬಾದದ ಪೇಟೆಯ ಶಂಕು ಸ್ಥಾಪನೆಯ [ಅಮಿನ ಮುಸ್ತಫಾ ಖಾನನ ಹೆಸರಿನಲ್ಲಿ] ಉಲ್ಲೇಖ ಮತ್ತು ಅಲ್ಲಿಯ ಹಣ್ಣಿನ ತೋಟದ ಮೇಲಿನ ಎಲ್ಲ ಕರಗಳ ಅಲಕ್ಷ್ಯತೆಯ ಘೋಷಣೆ. ಕೌಲನಾಮಾದ ಅಗೌರವ ತೋರಿದವರ ಮೇಲೆ ಮತ್ತು ಪೇಟೆಯನ್ನು ಆ ಹೆಸರಿನಿಂದ ಕರೆಯದೇ ಇರುವವರ ಮೇಲೆ ಶಾಪ.

ಸಂದರ್ಭ/ಉಲ್ಲೇಖ :

೧. ಎಆರ್‌ಐಇ ೧೯೫೬–೫೭, ಡಿ–೧೬

ಸ್ಥಳ – ತೊರಗಲ

೭೫

ದೊರೆತ ಸ್ಥಳ : ಕೋಟೆಯ ಬುರುಜಿನ ಮೇಲೆ.

ರಾಜ : ಮೊದಲನೆಯ ಇಬ್ರಾಹಿಮ ಆದಿಲಶಾಹ

ರಾಜ್ಯ : ಆದಿಲಶಾಹಿ

ದಿನಾಂಕ : ಶುಹೂರ ಶಕ ೯೩೫ ಹಿಜರಿ ಶಕ ೯೪೧ [ಕ್ರಿ. ಶ. ೧೫೩೫ ಮಾರ್ಚ್ ೨೩ ರಿಂದ ಮೇ ೨೪]

ಭಾಷೆ : ಪರ್ಶಿಯನ್

ವಿಷಯ : ಕಿರಿಯ [ಖುರ್ದ] ಅಜೀಜನ ಮಗ ಇಸ್ಮೈಲನಿಂದ, ಇಬ್ರಾಹಿಮ ಆದಿಲಶಾಹನ ಕಾಲದಲ್ಲಿ ಕೋಟೆಯು ಬುರುಜನ್ನು ಕಟ್ಟಲಾಯಿತೆಂಬ ಉಲ್ಲೇಖ.

ಸಂದರ್ಭ/ಉಲ್ಲೇಖ:

೧. ಎಆರ್ ಐಇ ೧೯೮೭–೮೮ ಸಿ–೪೮

೭೬

ದೊರೆತ ಸ್ಥಳ : ಕೋಟೆಯ ಮೇಲಿನ ಇನ್ನೊಂದು ಬುರುಜಿನ ಮೇಲೆ

ರಾಜ : ಎರಡನೆಯ ಇಬ್ರಾಹಿಮ ಆದಿಲಶಾಹ

ರಾಜ್ಯ : ಆದಿಲಶಾಹಿ

ದಿನಾಂಕ : ಶುಹೂರ ಶಕ ೯೮[೪] ಹಿಜರಿ ಶಕ ೯೯೧ ಜುಮಾದಾ I, ೨೯ [ಕ್ರಿ. ಶ. ೧೫೮೩ ಜೂನ್ ೧೦]

ಭಾಷೆ : ಕನ್ನಡ ಮತ್ತು ಪರ್ಶಿಯನ್

ವಿಷಯ : ದ್ವೈಭಾಷಿಕ ತ್ರುಟಿತ ಶಾಸನ. ಇಬ್ರಾಹಿಮ ಆದಿಲಶಾಹನ ಕಾಲದಲ್ಲಿ ಖಾನ–ಇ–ಅಜಮ್ ಇಬ್ರಾಹಿಮ ಖಾನನು ಮೇಲೆ ಹೇಳಿದ ವರುಷದಲ್ಲಿ ಬುರುಜ್–ಇ–ಹುಸೇನ್ ಕಟ್ಟಿದನು.

ಸಂದರ್ಭ/ಉಲ್ಲೇಖ:

೧. ಎಆರ್ ಐಇ ೧೯೮೭–೮೮ ಸಿ–೪೯

೭೭

ದೊರೆತ ಸ್ಥಳ : ಜಾಮಿ ಮಸೀದಿಯ ಮಧ್ಯದ ಮಿಹರಾಬಿನ ಮೇಲೆ .

ರಾಜ :

ರಾಜ್ಯ :

ದಿನಾಂಕ : [ಕ್ರಿ. ಶ. ೧೬ನೆಯ ಶತಮಾನ]

ಭಾಷೆ : ಅರೇಬಿಕ್

ವಿಷಯ : ಧಾರ್ಮಿಕ ಪಠ್ಯ. [ಕುರಾನಿನ ಅಧ್ಯಾಯ ೨, ಪದ್ಯ ೨೫೫, ಅಧ್ಯಾಯ ೨೨, ಪದ್ಯ ೧೮] ಹಾಗೂ First creed

ಸಂದರ್ಭ/ಉಲ್ಲೇಖ:

೧. ಎಆರ್ ಐಇ ೧೯೮೭-೮೮ ಸಿ-೫೦

ಬಳ್ಳಾರಿ ಜಿಲ್ಲೆ

ಸ್ಥಳ – ಬಳ್ಳಾರಿ

೭೮

ದೊರೆತ ಸ್ಥಳ : ಪೊಲಿಟೆಕ್ನಿಕ್ ಕಾಲೇಜ್ ಎದುರಿನ ಟಿಪ್ಪು ಸುಲ್ತಾನ ಮಸೀದಿಯ ಮಧ್ಯ ಮಿಹರಾಬಿನ ಮೇಲೆ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೨೦೪ [ಕ್ರಿ. ಶ. ೧೭೮೯–೯೦]

ಭಾಷೆ : ಅರೇಬಿಕ್

ವಿಷಯ : ದಿನಾಂಕದೊಂದಿಗೆ ಕೇವಲ ಧಾರ್ಮಿಕ ಪಠ್ಯ [ಮಸೀದಿ ಕಟ್ಟಡ ಮುಕ್ತಾಯ]

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೭೮–೭೯ ಡಿ–೫೮

೨. ಕರ್ನಾಟಕ ಪಿಎಯುಐದಲ್ಲಿ ಪಠ್ಯ ಪ್ರಕಟ ಪುಟ–೨೧,ನಂ. ೨೪

೭೯

ದೊರೆತ ಸ್ಥಳ : ಬ್ರೂಸ್ ಪೇಟೆಯ ಜಾಮೀ ಮಸೀದಿಯ ಎಡ ಕಮಾನಿನ ಮೇಲೆ.

ರಾಜ :

ರಾಜ್ಯ : ಈಸ್ಟ ಇಂಡಿಯಾ ಕಂಪನಿ

ದಿನಾಂಕ : ಹಿಜರಿ ಶಕ ೧೨೨೧ [ಕ್ರಿ. ಶ. ೧೮೦೬-೦೭]

ಭಾಷೆ : ಪರ್ಶಿಯನ್

ವಿಷಯ : ಈಸ್ಟ ಇಂಡಿಯಾ ಕಾಲದಲ್ಲಿ ಪೀಟರ ಬ್ರೂಸನ ಪ್ರಯತ್ನದಿಂದ ಮಸೀದಿಯನ್ನು ಕಟ್ಟಲಾಯಿತು.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೭೮-೭೯ ಡಿ-೬೧

೨. ಕರ್ನಾಟಕ ಪಿಎಯುಐದಲ್ಲಿ ಪತ್ಯ ಪ್ರಕಟ ಪುಟ-೨೧,ನಂ ೨೫

೮೦

ದೊರೆತ ಸ್ಥಳ : ಕೌಲ ಬಜಾರದಲ್ಲಿಯ ಜಾಮೀ ಮಸೀದಿಯ ಕಟ್ಟಡದ ಮುಂಭಾಗದಲ್ಲಿ.

ರಾಜ :

ರಾಜ್ಯ :

ದಿನಾಂಕ : ಹಿಜರಿ ಶಕ ೧೨೬೭ [ಕ್ರಿ. ಶ. ೧೮೫೦-೫೧]

ಭಾಷೆ : ಪರ್ಶಿಯನ್

ವಿಷಯ : ಮೇಲೆ ಹೇಳಿದ ವರುಷದಲ್ಲಿ ಮಸೀದಿಯನ್ನು ಕಟ್ಟಲಾಯಿತು.

ಸಂದರ್ಭ/ಉಲ್ಲೇಖ :

೧. ಎಆರ್ ಐಇ ೧೯೭೮-೭೯ ಡಿ-೫೭

೨. ಕರ್ನಾಟಕ ಪಿಎಯುಐದಲ್ಲಿ ಪತ್ಯ ಪ್ರಕಟ ಪುಟ-೨೨, ನಂ ೨೭

೮೧

ದೊರೆತ ಸ್ಥಳ : ನಲಗುಂದ ಮೊಹಲ್ಲಾದಲ್ಲಿಯ ಕಾದ್ರಿಯಾ ಮಸೀದಿ ಕಟ್ಟಡದ ಮುಂಭಾಗದಲ್ಲಿ.

ರಾಜ :

ರಾಜ್ಯ :

